hosakannada @gmail.com +9181478 20538 Hosakannada_Weekly hosakannada_weekly

ಮಂಗಳೂರು | ಉಡುಪಿ | ಕಾಸರಗೋಡು | ಕೊಡಗು | ಚಿಕ್ಕಮಗಳೂರು | ಹಾಸನ | ಹುಬ್ಬಳ್ಳಿ-ಧಾರವಾಡ

# ಹೊಸ ಕನ್ನಡ


ವಸ್ತುನಿಷ್ಠ ವರದಿ, ವಿಭಿನ್ನ ನಿರೂಪಣೆ ವಾರಪತ್ರಿಕೆ




Reg No KNKAN/25/A233 www.hosakannada.com ಸಂಪುಟ: 01 ಸಂಚಿಕೆ: 03 ಪುಟಗಳು: 06 ಬೆಲೆ: 7ರೂ. ಜನವರಿ 01ರಿಂದ 08, 2026

## ಅಮ್ಮನ ಜತೆ ನೇಣು ಹಾಕುವ ಆಟ, ಯುವಕ ಸಾವು!

• ಹೊಸ ಕನ್ನಡ, ಬೆಂಗಳೂರು



ಅಮ್ಮನ ಜತೆ ನೇಣು ಹಗ್ಗದ ತಮಾಷೆ ಮಾಡಲು ಹೋದ ಯುವಕ ನಿಜಕ್ಕೂ ನೇಣು ಕುಣಿಕೆಗೆ ಸಿಲುಕಿ ಯುವಕ ದಾರುಣವಾಗಿ ಮೃತಪಟ್ಟಂತಹ ಘಟನೆ ಬೆಂಗಳೂರಲ್ಲಿ ನಡೆದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ರೋಹಿತ್ ನಗರದಲ್ಲಿ ಈ ದುರ್ಘಟನೆ ನಡೆದಿದೆ. ಮೃತ ಯುವಕನನ್ನು 28 ವರ್ಷದ ವಿಜಯ್ ಕುಮಾರ್ ಎಂದು ಗುರುತಿಸಲಾಗಿದೆ. 3ನೇ ಪುಟಕ್ಕೆ...

## ನದಿ ಸೇತುವೆ ನಿರ್ಮಾಣಕ್ಕೆ 2.75 ಕೋ. ಮಂಜೂರು

• ಹೊಸ ಕನ್ನಡ, ಬೆಳ್ತಂಗಡಿ



ತಾಲೂಕಿನ ಬಹುಕಾಲದ ಬೇಡಿಕೆಯಾಗಿದ್ದ ಶಿಶಿಲ ಗ್ರಾಮದ ಶಿಶಿಲೇಶ್ವರ ದೇವಸ್ಥಾನದ ಬಳಿ ಕಪಿಲ ನದಿಗೆ ಸೇತುವೆ ನಿರ್ಮಾಣ ಕಾಮಗಾರಿ 2 ಕೋಟಿ 75 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಬೆಳ್ತಂಗಡಿ ಕಾಂಗ್ರೆಸ್ ನಾಯಕ ರಕ್ಷಿತ್ ಶಿವರಾಂ ತಿಳಿಸಿದ್ದಾರೆ. ಸಿಎಂ ಸಿದ್ದರಾಮಯ್ಯನವರು ಲೋಕೋಪಯೋಗಿ ಇಲಾಖೆ ಮುಖಾಂತರ ಈ ಅನುದಾನ ಬಿಡುಗಡೆಗೊಳಿಸಿದ್ದಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಕ್ಷಿತ್ ಶಿವರಾಂ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


## ಆಸರೆ ಎಲೆಕ್ಟ್ರಾನಿಕ್ಸ್ ಹೋಮ್ ಅಪ್ಲಯನ್ಸಸ್ ಶುಭಾರಂಭ




• ಹೊಸ ಕನ್ನಡ, ಸುಳ್ಯ

ಗುತ್ತಿಗಾರಿನಲ್ಲಿ ಆಸರೆ ಎಲೆಕ್ಟ್ರಾನಿಕ್ಸ್ ಮತ್ತು ಹೋಮ್ ಅಪ್ಲಯನ್ಸಸ್ ಸಂಸ್ಥೆ ಶುಭಾರಂಭಗೊಂಡಿದೆ. ಆಸರೆ ಸಂಸ್ಥೆಯನ್ನು ಎಲ್ಲರೂ ಪೋಷಿಸಬೇಕು, ಸಾವಿರ ಸಾವಿರ ಜನರಿಗೆ ನೆರಳಾಗಿ ಈ ಸಂಸ್ಥೆ ಬೆಳಗಲಿ ಎಂದು ಆರಿಕೋಡಿ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿಗಳಾದ ಶ್ರೀ ಹರೀಶ್ ಆರಿಕೋಡಿಯವರು ಹೇಳಿದರು. ಅವರು ಗುತ್ತಿಗಾರಿನಲ್ಲಿ ಆಸರೆ ಇಲೆಕ್ಟ್ರಾನಿಕ್ಸ್ ಹೋಂ ಅಪ್ಲಯನ್ಸಸ್ ಶುಭಾರಂಭಗೊಳಿಸಿ ಮಾತನಾಡಿದರು. ಗುತ್ತಿಗಾರಿನ ಕೆನರಾ ಬ್ಯಾಂಕ್ ನ ಮುಂಭಾಗದ ದೇವಮಾತ ಕಾಂಪ್ಲೆಕ್ಸ್ ಆಸರೆ ಸಂಸ್ಥೆಯನ್ನು ಉದ್ಘಾಟಿಸಿ ಅವರು ಮಾತನಾಡಿ ಶುಭ ಹಾರೈಸಿದರು.

## ಅರ್ಚಕ ಸಹಾಯಕ ವೃತ್ತಿಯ ಪತಿ ಪತ್ನಿ ಬಂಧನ



• ಹೊಸ ಕನ್ನಡ, ಪುತ್ತೂರು, ಪಂಜ

ಪುತ್ತೂರಿನ ಕೊಂಬೆಟ್ಟು ನಿವಾಸಿ ನಿವೃತ್ತ ಪ್ರಾಂಶುಪಾಲ ಮನೆಯಲ್ಲಿದ್ದ ದಂಪತಿಯನ್ನು ಬೆದರಿಸಿ ಕಳ್ಳವ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳಿಬ್ಬರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಮುಂಡೂರು ಮೂಲದ ಪಂಜ ಪಲ್ಲೋಡಿಯಲ್ಲಿ ಬಾಡಿಗೆ ಮನೆಯಲ್ಲಿರುವ ಅರ್ಚಕ ಸಹಾಯಕರಾಗಿ ವೃತ್ತಿ ಮಾಡುತ್ತಿರುವ ಕಾರ್ತಿಕ್ ರಾವ್ (31)ಮತ್ತು ಅವರ ಪತ್ನಿ ಕೆ.ಎಸ್ ಸ್ವಾತಿ ರಾವ್(25) ಬಂಧಿತ ಆರೋಪಿಗಳು. ಕಳೆದ ವಾರ, ಡಿ.17ರಂದು ಮಧ್ಯರಾತ್ರಿ ಅಪರಿಚಿತರಿಬ್ಬರು ಹೆಲ್ಮೆಟ್ ಧರಿಸಿಕೊಂಡು ಕೊಂಬೆಟ್ಟು ನಿವಾಸಿ ವಿವೇಕಾನಂದ ಕಾಲೇಜು ನಿವೃತ್ತ ಪ್ರಾಂಶುಪಾಲ ಎ.ವಿ.ನಾರಾಯಣರವರ ಮನೆಗೆ ಹಿಂಬಾಗಿಲಿನಿಂದ ನುಗ್ಗಿ ಎ.ವಿ.ನಾರಾಯಣ 3ನೇ ಪುಟಕ್ಕೆ...

# ಓಟಿನ ಕೋಗಿಲು ಕೂಗಿತಲೇ...!

• ಹೊಸ ಕನ್ನಡ, ಬೆಂಗಳೂರು:

ಬೆಂಗಳೂರಿನ ಕೋಗಿಲು ಲೇಔಟ್ ನಲ್ಲಿ ಅಕ್ರಮವಾಗಿ ನುಸುಳಿ ನೆಲೆಸಿದ್ದ ಕೇರಳ, ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾ ಸೇರಿದಂತೆ ಇತರ ಅನ್ಯ ರಾಜ್ಯದ ಬಹುತೇಕ ಅಕ್ರಮ ವಲಸಿಗರ ನೆಲೆಗಳನ್ನು ನೆಲಸಮ ಮಾಡಿದ ಸಿದ್ದರಾಮಯ್ಯ ನೇತೃತ್ವದ ಗ್ಯಾರಂಟಿ ಸರ್ಕಾರ ಕೆಲ ದಿನಗಳಲ್ಲೇ ಉಲ್ಟಾ ಹೊಡೆದಿದೆ. ಅತ್ತ ಕೇರಳದ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ಹೈಕಮಾಂಡ್ ಒತ್ತಡಕ್ಕೆ ಮಣಿದು, ಈ ಅಕ್ರಮ ವಲಸಿಗರಿಗೆ ಬೈಯ್ಯಪ್ಪನಹಳ್ಳಿಯಲ್ಲಿ ತ್ವರಿತಗತಿಯಲ್ಲಿ ಮನೆ ಕಟ್ಟಿಕೊಡಲು ಮುಂದಾಗಿದೆ. ಸೈಟ್ ಬಿಟ್ಟಿ ಭಾಗ್ಯ ಎಂಬ 7ನೆಯ ಗ್ಯಾರಂಟಿ ಅಸ್ತಿತ್ವಕ್ಕೆ ಬಂದಿದೆ.

**ನಿಜವಾದ ನಿರಾಶ್ರಿತರಿಗೆ ಯಾಕಿಲ್ಲ ಇಂಥಾ ಸೌಭಾಗ್ಯ!?**

**ವಲಸಿಗರಿಗೆ ಬಿಟ್ಟಿ ಸೈಟ್ ಭಾಗ್ಯ!**

ಅದೆಷ್ಟೋ ವರ್ಷಗಳಿಂದ ನಾನಾ ಕಾರಣಗಳಿದಾಗಿ ನಿರಾಶ್ರಿತರಾಗಿ ಬೀದಿಗೆ ಬಿದ್ದಿರುವ ಅದೆಷ್ಟೋ ಮಂದಿ ನಮ್ಮ ರಾಜ್ಯದ ನಿಜವಾದ ನಿರಾಶ್ರಿತರ ಮೇಲೆ ಎಳ್ಳಷ್ಟು ಕರುಣೆ ತೋರದ ಕೈ ಸರ್ಕಾರ ಕೇವಲ ವೋಟಿನ ಆಸೆಗೆ ಬಲಿ ಬಿದ್ದು ಅಕ್ರಮ ನುಸುಳು ಕೋರರ ಮೇಲೆ ಅನುಕಂಪ ತೋರಿಸುತ್ತಿರುವುದರ ವಿರುದ್ಧ ರಾಜ್ಯದ



ಜನತೆ ಆಕ್ರೋಶಭರಿತರಾಗಿದ್ದಾರೆ.

ಕಾಂಗ್ರೆಸ್ ಮುಖಂಡ ವಾಸಿಮ್ ಅಕ್ರಂ ಎಂಬಾತ ಕೇರಳ, ಪಶ್ಚಿಮ ಬಂಗಾಳ ಹಾಗೂ ಬಾಂಗ್ಲಾ ಸೇರಿದಂತೆ ಅನ್ಯ ರಾಜ್ಯಗಳ ಮುಸ್ಲಿಮರಿಗೆ ಇಲ್ಲಿ ನಕಲಿ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಸಂಬಂಧಿಸಿದ ಎಲ್ಲಾ ನಕಲಿ ದಾಖಲೆಗಳನ್ನು ಸೃಷ್ಟಿಸಿ ಒಂದೊಂದು ಕುಟುಂಬದಿಂದ ತಲಾ ನಾಲ್ಕೈದು ಲಕ್ಷ ರೂಪಾಯಿಗಳನ್ನು ಪಡೆದುಕೊಂಡ ಬಗ್ಗೆ ದೂರುಗಳಿವೆ. ವಾಸಿಂ ಅಕ್ರಮ ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ರವರ ಒಡನಾಡಿ ಎನ್ನಲಾಗಿದೆ. ಅಕ್ರಮ್, ಹೆಸರಿಗೆ ತಕ್ಕಂತೆ ಅಕ್ರಮ ಸೃಷ್ಟಿಸುವುದರಲ್ಲಿ ನಿಷ್ಣಾತ ಎನ್ನಲಾಗಿದೆ. ಅಲ್ಲಿ ಅಕ್ರಮ ನೆಲೆಗಳನ್ನು ಕಲ್ಪಿಸಿರುವ ವಿಚಾರವನ್ನ ಇದೀಗ ಸ್ವತಹ ಅಲ್ಲಿನ ನಿರಾಶ್ರಿತರೇ ಮಾಧ್ಯಮಗಳೊಂದಿಗೆ ಬಹಿರಂಗಪಡಿಸಿದ್ದಾರೆ. ಅದೇ ರೀತಿ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಿರೋಧ ಪಕ್ಷ ಬಿಜೆಪಿ ಪಕ್ಷ ಬಿಡುಗಡೆಗೊಳಿಸಿದೆ. ಆದರೆ ಸರ್ಕಾರ ಮಾತ್ರ ಅಕ್ರಮ ನುಸುಳಿಕೋರರನ್ನು ಹೊರದಬ್ಬಿ ಅವರ ವಿರುದ್ಧ ಕೈಗೊಳ್ಳುವುದರ ಬದಲು ತನ್ನ ತಪ್ಪನ್ನು ಮುಚ್ಚಿಟ್ಟು ಅದೇ ನುಸುಳುಕೋರರಿಗೆ ಬೈಯ್ಯಪ್ಪನ ಹಳ್ಳಿಯ ಸರ್ವೆ ನಂಬರ್ 99ರ 9 ಎಕ್ರೆ ಜಾಗದಲ್ಲಿ ಸುಮಾರು ನೂರು ಕೋಟಿ ವೆಚ್ಚದಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯನ್ವಯ ಸ್ವಂತ ಮನೆಗಳನ್ನು ಕಟ್ಟಿಕೊಡಲು ಮುಂದಾಗಿರುವುದನ್ನು ನೋಡಿದರೆ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಅಕ್ರಮ ನುಸುಳುಕೋರರ ನೆಲೆಯನ್ನಾಗಿಸಲು ಹೊರಟಿದೆಯೇನೋ ಎಂಬ ಅನುಮಾನ ರಾಜ್ಯದ ಪ್ರತಿಯೊಬ್ಬ ಜನತೆಗೂ ಮೂಡುವಂತಾಗಿದೆ. 3ನೇ ಪುಟಕ್ಕೆ...

**ಯೋಜನೆಗಳು ಸ್ಥಗಿತ**

ರಾಜ್ಯದಲ್ಲಿ ಗ್ಯಾರಂಟಿ ಸರಕಾರ ಬಂದಾಗಿನಿಂದ, ಬಜೆಟ್ ಇಲ್ಲದೆ,ಅಂಬೇಡ್ಕರ್ ವಸತಿ ಯೋಜನೆ ಮತ್ತು ರಾಜೀವ್ ಗಾಂಧಿ ವಸತಿ ಯೋಜನೆಗಳಂತಹ ಹಲವು ಯೋಜನೆಗಳು ಸ್ಥಗಿತ ಆದುದರಿಂದ ಪ್ರತಿ ಹಳ್ಳಿ ಹಳ್ಳಿಗಳಲ್ಲೂ ಬಡವರು ಸ್ವಂತ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

## ವಂಚಿಸಿದ್ದು ಮಗ, ಶಿಕ್ಷಿಸಿದ್ದು ಅಪ್ಪನನ್ನು!

### ಬಿಜೆಪಿ ನಾಯಕ ಜಗನ್ನಿವಾಸ ರಾವ್ ಪಕ್ಷದಿಂದ ಉಚ್ಛಾಟನೆ

• ಹೊಸ ಕನ್ನಡ, ಮಂಗಳೂರು

ಮದುವೆಯಾಗುವುದಾಗಿ ನಂಬಿಸಿ ಯುವತಿಗೆ ವಂಚನೆ ಮಾಡಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿ ಕೃಷ್ಣ ಜೆ. ರಾವ್ ತಂದೆ ಹಾಗೂ ಬಿಜೆಪಿ ಮುಖಂಡ ಜಗನ್ನಿವಾಸರಾವ್ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಲಾಗಿದೆ. ಈ ಕುರಿತು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ಖಡಕ್ ಆದೇಶ ಹೊರಡಿಸಿದ್ದಾರೆ.

ವಂಚನೆ ಪ್ರಕರಣ ಬೆಳಕಿಗೆ ಬಂದ ನಂತರ ಜಗನ್ನಿವಾಸ ರಾವ್ ಅವರಿಗೆ ನೋಟಿಸ್ ನೀಡಿ ಪಕ್ಷದ ಚಟುವಟಿಕೆಗಳಿಂದ ದೂರ ಇಡಲಾಗಿತ್ತು. ಆಗ ಜಗನ್ನಿವಾಸ ರಾವ್ ಅವರು ?ಡಿಎನ್ಎ ಪರೀಕ್ಷೆಯಲ್ಲಿ ಸತ್ಯ ಸಾಬೀತಾದರೆ, ಸಂತ್ರಸ್ತ ಯುವತಿಯೊಂದಿಗೆ ಮಗನ ಮದುವೆ ಮಾಡಿಸುತ್ತೇನೆ? ಎಂದು ಪಕ್ಷದ ವೇದಿಕೆಯಲ್ಲಿ ಹಾಗೂ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರ ಮುಂದೆ ಹೇಳಿದ್ದರು. ನಂತರ ವೈದ್ಯಕೀಯ ವರದಿಗಳು ಬಂದ ನಂತರವೂ ತಮ್ಮ ಮಾತಿನಂತೆ ನಡೆದುಕೊಳ್ಳದ ಕಾರಣ ಈ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ವರದಿಯಾಗಿದೆ.

**ಮಗನ ತಪ್ಪಿಗೆ ಅಪ್ಪ ಹೇಗೆ ಜವಾಬ್ದಾರ?**

ಮಗನ ತಪ್ಪಿಗೆ ಅಪ್ಪನನ್ನು ಉಚ್ಚಾಟನೆ ಮಾಡಿದ ಬಿಜೆಪಿಯ ಈ ನಿರ್ಧಾರಕ್ಕೆ ಟೀಕೆಗಳು ಕೂಡ ಕೇಳಿ ಬಂದಿವೆ. ಮಗನ ವಂಚನೆಗೆ ಅಪ್ಪನಿಗೆ ಯಾಕೆ ಶಿಕ್ಷೆ? ಅವರಿಬ್ಬರಿಗೆ ಮದುವೆ ಮಾಡಿಸುತ್ತೇನೆ ಎಂದು ಮಗನ ಮೇಲಿನ ವಿಶ್ವಾಸದಿಂದ ಅಪ್ಪ ಹೇಳಿರಬಹುದು. ಆದರೆ ಮಗ ಮದುವೆಯಾಗಲು ಒಪ್ಪದಿದ್ದರೆ, ಅಪ್ಪನಾದರೂ ಏನು ಮಾಡುತ್ತಾರೆ? ಈಗಿನ ಮಕ್ಕಳು ಅಪ್ಪ ಅಮ್ಮನ ಮಾತು ಕೇಳುತ್ತಾರಾ? ಇತ್ಯಾದಿ ಚರ್ಚೆ ಆಗುತ್ತಿದೆ.

# ಅನುದಾನ ಬಂದಿಲ್ಲ

### ಮತ್ಸ್ಯತೀರ್ಥ ಶಿಶಿಲೇಶ್ವರ ದೇವಾಲಯದ ಕಪಿಲ ನದಿಗೆ ಅನುದಾನ

• ಹೊಸ ಕನ್ನಡ, ಶಿಶಿಲ



ಗ್ರಾಮ ಪಂಚಾಯತ್ ಮಟ್ಟದ ಜನಸ್ಪಂದನ ಸಭೆ ಶಾಸಕ ಹರೀಶ್ ಪೂಂಜ ಅಧ್ಯಕ್ಷತೆಯಲ್ಲಿ ಡಿ. 30ರಂದು ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಮತ್ಸ್ಯತೀರ್ಥ ಶಿಶಿಲೇಶ್ವರ ದೇವಾಲಯದ ಕಪಿಲ ನದಿಗೆ ಸೇತುವೆ ನಿರ್ಮಾಣಕ್ಕೆ 2 ಕೋಟಿ 75 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ ಎಂದು ಸುದ್ದಿ ಹರಿದಾಡುತ್ತಿದೆ. ಆದರೆ ಈ ಅನುದಾನದಲ್ಲಿ ಸೇತುವೆ ನಿರ್ಮಾಣವಾಗುತ್ತಾ? ಸಾರ್ವಜನಿಕರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ನಿರ್ಮಾಣವಾಗಲಿ. ಆದರೆ ಪಿಡಬ್ಲ್ಯೂಡಿ, ಸಮಾಜ ಕಲ್ಯಾಣ, ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ಬಿಡುಗಡೆಗೊಂಡ ಬಗ್ಗೆ ಮಾಹಿತಿ ಬಂದಿಲ್ಲ. ಕಳೆದ ಅವಧಿಯಲ್ಲಿ 10 ಕೋಟಿ ರೂಪಾಯಿ ವೆಚ್ಚ ಸೇತುವೆ ನಿರ್ಮಾಣಕ್ಕೆ ಸರ್ವೇ ನಡೆಸಲಾಗಿದೆ. ಇದುವರೆಗೂ ಸೇತುವೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾದ ಬಗ್ಗೆ ಯಾವುದೇ ಇಲಾಖೆಯಿಂದ ಅಧಿಕೃತ ಆದೇಶ ಬಂದಿಲ್ಲ ಎಂದು ಶಾಸಕರು ಸ್ಪಷ್ಟನೆ ನೀಡಿದರು.

ಗ್ರಾಮ ಪಂಚಾಯಿತಿ ಜಿಪಿಎಸ್ ಫೋಟೋ ತೆಗೆದರೆ ಮೂಲರಹಳ್ಳಿ ಎಂದು ಬರುತ್ತಿದೆ ನಮ್ಮ ಶಿಶಿಲ ಮೂಡಿಗೆರೆ ತಾಲ್ಲೂಕಿನಲ್ಲಿದೆಯ ಎಂದು ಗ್ರಾಮಸ್ಥರು ಹೇಳಿದಾಗ ಈ ಬಗ್ಗೆ ಜಿಲ್ಲಾ ಪಂಚಾಯತ್ ಸಿಇಒಗೆ ಪತ್ರ ಬರೆಯಲು ಶಾಸಕರು ಸೂಚಿಸಿದರು. ಗ್ಯಾರಂಟಿ ಯೋಜನೆಯಿಂದ ಡಿಪ್ಪೋಗೆ ಇದುವರೆಗೆ ಯಾವುದೇ ಹೊಸ ಬಸ್ ಗಳು ಬಂದಿಲ್ಲ ಎಂದು ಶಾಸಕರು ತಿಳಿಸಿದರು.

ಅರಣ್ಯ ಕಂದಾಯ ಇಲಾಖೆ ಜಂಟಿ ಸರ್ವೇ ನಡೆಸಿಕೊಂಡು ನಮ್ಮ ವರ್ಗ ಭೂಮಿಯವರೆಗೆ ನಡೆಸಿದೆ. ಇದರಿಂದ ನಮಗೆ ಸಮಸ್ಯೆಯಾಗುತ್ತದೆ ಎಂದು ಗ್ರಾಮಸ್ಥರು ಪ್ರಶ್ನಿಸಿದಾಗ ಕಳೆಂಜದ ಗ್ರಾಮದ 309 ಸರ್ವೇ ನಂಬರ್ ನಲ್ಲಿ ಸರ್ವೇ ನಡೆಸುವುದರಿಂದ ಗಡಿ ಗುರುತು ಪರಿಶ್ಕರಣೆಗಾಗಿ ಕೆಲ ಜಾಗದ ಗಡಿಯವರೆಗೆ ಸರ್ವೇ ನಡೆಸಲಾಗಿದೆ. ಸರ್ವೆ ಕಾರ್ಯ ನಡೆಸುತ್ತಿರುವುದು ಸರ್ವೆ ಇಲಾಖೆಯವರ ಜವಾಬ್ದಾರಿ, ಸ್ಥಳೀಯರಿಗೆ ಮಾಹಿತಿ ಅಥವಾ ನೋಟೀಸ್ ನೀಡುವ ಜವಾಬ್ದಾರಿ ಎಂದರು ಶಾಸಕರು.

## ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಎಪ್ರಿಲ್ 29 54ನೇ ಉಚಿತ ಸಾಮೂಹಿಕ ವಿವಾಹ

• ಹೊಸ ಕನ್ನಡ, ಧರ್ಮಸ್ಥಳ



ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ 2026ರ ಎಪ್ರಿಲ್ 29 ರಂದು ಸಂಜೆ ಗಂಟೆ 6.40ಕ್ಕೆ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ಮದುವೆಯ ಎಲ್ಲಾ ವೆಚ್ಚವನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಭರಿಸಲಾಗುವುದು. ಆದರೆ ಎರಡನೇ ವಿವಾಹಕ್ಕೆ ಇಲ್ಲಿ ಅವಕಾಶವಿರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ. ವರದಕ್ಷಿಣೆ ಹಾಗೂ ಮದುವೆಗಾಗುವ ದುಂದುವೆಚ್ಚವನ್ನು ತಡೆಯುವ ಉದ್ದೇಶದಿಂದ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆಯವರು 1972ರಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹವನ್ನು ಪ್ರತಿ ವರ್ಷ ನಡೆಸಲಾಗುತ್ತಿದೆ. 3ನೇ ಪುಟಕ್ಕೆ...

## ರಾಜ್ಯದ ಶ್ರೀಮಂತ ದೇವಾಲಯಗಳ ಪಟ್ಟಿ ಪ್ರಕಟ ಮತ್ತೆ ನಂ.1 ಸ್ಥಾನದಲ್ಲಿ ಕುಕ್ಕಪ್ಪ!

• ಹೊಸ ಕನ್ನಡ, ಕುಕ್ಕೆ ಸುಬ್ರಹ್ಮಣ್ಯ




ರಾಜ್ಯ ಮುಜರಾಯಿ ಇಲಾಖೆಯು ಶ್ರೀಮಂತ ದೇವಾಲಯಗಳ ಪಟ್ಟಿ ಬಿಡುಗಡೆ ಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರ ಅಗ್ರಸ್ಥಾನ ಪಡೆದಿದೆ. ರಾಜ್ಯದ ಎ ಗ್ರೇಡ್ ದೇವಾಲಯಗಳ ಪೈಕಿ ಕರಾವಳಿ ದೇವಾಲಯಗಳೇ ಮುಂದಿದೆ.

ರಾಜ್ಯದ ದೇವಳಗಳ ಆದಾಯದಲ್ಲಿ ಟಾಪ್ 10ರಲ್ಲಿ ಕರಾವಳಿಯ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳ, ಮಂದಾರ್ತಿ ಶ್ರೀದುರ್ಗಾಪರಮೇಶ್ವರಿ ದೇವಳ ಸ್ಥಾನ ಪಡೆದುಕೊಂಡಿವೆ. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ 2023-24ರಲ್ಲಿ 146.01 ಕೋಟಿ ಆದಾಯ ಪಡೆದಿದ್ದರೆ, 2024-24ರಲ್ಲಿ 155.95 ಕೋಟಿ ರೂ. ಆದಾಯ ಗಳಿಸಿದೆ. ಕುಕ್ಕೆ ಸುಬ್ರಹ್ಮಣ್ಯ ದೇಗುಲಕ್ಕೆ 2023-24ರಲ್ಲಿ 146.1 ಕೋಟಿ ಇದ್ದ ಆದಾಯ 2024-25ರಲ್ಲಿ 155.95 ಕೋಟಿಗೆ ತಲುಪಿದೆ. 3ನೇ ಪುಟಕ್ಕೆ...




## ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ

### ಹಿರಿಯರ ಪರಂಪರೆ ಮುಂದುವರಿಕೆಗೆ ಯುವಕರು ಎಡವುತ್ತಿರುವುದು ಖೇದಕರ

• ಹೊಸ ಕನ್ನಡ, ಸುಳ್ಯ

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸುಳ್ಯ ತಾಲೂಕು ಘಟಕ, ಸಮ್ಮೇಳನ ಸ್ವಾಗತ ಸಮಿತಿ ಕುಕ್ಕುಜಡ್ಕ ಇದರ ಆಶ್ರಯದಲ್ಲಿ ಕುಕ್ಕುಜಡ್ಕದ ಚೊಕ್ಕಾಡಿ ವಿದ್ಯಾಸಂಸ್ಥೆಯಲ್ಲಿ ಸುಳ್ಯ ತಾಲೂಕು 28ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಯಾವುದೇ ವ್ಯವಸ್ಥೆಗಳು ಇಲ್ಲದ ಕಾಲದಲ್ಲಿ ನಮ್ಮ ಹಿರಿಯರು ಕಟ್ಟಿದ ಕಲಾ, ಸಾಹಿತ್ಯ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಲು ನಮ್ಮ ಯುವ ಜನಾಂಗ ಎಡವುತ್ತಿರುವುದು ಖೇದಕರ ಎಂದು ಹಿರಿಯ ಸಾಹಿತಿ ಸುರೇಶ್ ಕಂಜರ್ಪಣೆ ಅಭಿಪ್ರಾಯಪಟ್ಟಿದ್ದಾರೆ. ಹಿರಿಯ ಸಾಹಿತಿ ಕೆ.ಆರ್.ತೇಜಕುಮಾರ್ ಬಡ್ಡಡ್ಕ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಹೊಸ ತಲೆಮಾರನ್ನು ಸಾಹಿತ್ಯ ಕಲೆಯೆಡೆಗೆ ಆಕರ್ಷಿತವಾಗುವ ಮತ್ತು ಪ್ರೇರೇಪಿಸುವಂತೆ ಶಿಕ್ಷಣ, ಸಾಹಿತ್ಯ ಬೇಕು. ಆಗ ಮಾತ್ರ ನಮ್ಮ ಸಾಹಿತ್ಯ ಕಲೆ,



ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಲು ಸಾಧ್ಯ ಎಂದು ಅವರು ಹೇಳಿದರು. ಸೃಜನಶೀಲ ಮನಸ್ಸಿಗೆ ನೀರೆರೆಯುವ ಕೆಲಸ ಆಗಬೇಕು ಎಂದ ಅವರು ಸುಳ್ಯ ತಾಲೂಕಿನಲ್ಲಿ 16 ಶಾಲೆಗಳು ಸೇರಿ ರಾಜ್ಯದಲ್ಲಿ 3,200 ಶಾಲೆಗಳು ಶತಮಾನ ಕಂಡಿದೆ. ಆ ಶಾಲೆಗಳ ವೈಭವವನ್ನು ಮತ್ತೆ ಮರುಕಳಿಸಬೇಕು ಎಂದು ಕಂಜರ್ಪಣೆ ಕರೆ ನೀಡಿದರು. ಉಳಿದ ದೇಶಗಳಲ್ಲಿ ಅವರದ್ದೇ ಭಾಷೆಗಳಲ್ಲಿ ಸಂಶೋಧನೆ, ಸಾಧನೆ ಮಾಡುತ್ತಿದ್ದರೆ, ಭಾರತ ಮಾತ್ರ ಇನ್ನೂ ಇಂಗ್ಲೀಷ್ ಎಂಬ ವಸಾಹತುಶಾಹಿ ದಾಸ್ಯ ಮಾನಸಿಕತೆಗೆ ಒಳಗಾಗಿದೆ. ನಾವು ಈ ಮಾನಸಿಕತೆಯಿಂದ ಹೊರ ಬಂದು ನಮ್ಮ ಭಾಷೆ, ಸಾಹಿತ್ಯ ಸಾಂಸ್ಕೃತಿಕ ಪರಂಪರೆಯನ್ನು ಯುವ ತಲೆಮಾರಿಗೆ ತಿಳಿಸಿ ನಮ್ಮ ಬೇರುಗಳನ್ನು ಗಟ್ಟಿಗೊಳಿಸಬೇಕು ಎಂದರು. ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, 'ಸುಳ್ಯ ತಾಲೂಕು ಸಮೃದ್ಧ ಸಾಹಿತ್ಯ ನೆಲ, ಈ ಸಾಹಿತ್ಯ ಪರಂಪರೆ ಮುಂದುವರಿಯಲು ಯುವಸಾಹಿತ್ಯ ರಚನೆಯಾಗಬೇಕು ಎಂದು ಹೇಳಿದರು. ಸಾಹಿತ್ಯ ಸಮಾಜವನ್ನು ಪರಿವರ್ತನೆ ಮಾಡುತ್ತದೆ. ಎಲ್ಲಾ ಪಿಡುಗುಗಳಿಂದಲೂ ದೂರ ಮಾಡಿ ಸಮಾಜವನ್ನು ಸುಶಿಕ್ಷಿತವಾಗಿಡಲು, ಸಂರಕ್ಷಣೆ ಮಾಡಲು ಭಾಷೆ, ಸಾಹಿತ್ಯ ಪೂರಕ' ಎಂದು ಹೇಳಿದರು. ಅರೆಭಾಷೆ ಸಾಹಿತ್ಯ ಮತ್ತು ಸಂಸ್ಕೃತಿ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಹೊಸ ಕೃತಿಗಳ ಬಿಡುಗಡೆ ಮಾಡಿ ಮಾತನಾಡಿ 'ಸಾಹಿತಿಗಳ ತವರೂರು ಚೊಕ್ಕಾಡಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅತ್ಯಂತ ಅರ್ಥ ಪೂರ್ಣ ಎಂದು ಹೇಳಿದರು. ಓದುಗರ ಸಂಖ್ಯೆ ಹೆಚ್ಚಾಗಬೇಕು ಆಗ ಪುಸ್ತಕಗಳ ರಚನೆ, ಸಾಹಿತಿಗಳ ಸೃಷ್ಟಿ ಇನ್ನಷ್ಟು ಹೆಚ್ಚಾಗಲು ಸಾಧ್ಯ ಎಂದು ಹೇಳಿದರು. 3ನೇ ಪುಟಕ್ಕೆ...

ಹೊಸ ಕನ್ನಡ
ವಸ್ತುನಿಷ್ಠ ವರದಿ, ವಿಭಿನ್ನ ನಿರೂಪಣೆ
ಜನವರಿ 01 ರಿಂದ 08, 2026



ಮೊದಲ ಪುಟದಿಂದ...

# ಓಟಿನ ಕೋಗಿಲು ಕೂಗಿತಲೇ ಬಹುಪರಾಕ್

## ರಾಜ್ಯದಲ್ಲಿ ಎಲ್ಲೆಲ್ಲಿ ನಿರಾಶ್ರಿತರಿದ್ದಾರೆ?

- ಕಾಳಿ ನದಿಗೆ ಅಡ್ಡವಾಗಿ ಕಟ್ಟಲಾಗಿರುವ ಸೂಪಾ ಅಣೆಕಟ್ಟು ಮತ್ತು ಇತರ ಜಲ ವಿದ್ಯುತ್ ಯೋಜನೆಗಳಿಂದ ಈಗಾಗಲೇ ಸುಮಾರು 25ಕ್ಕೂ ಹೆಚ್ಚು ಹಳ್ಳಿಗಳು ಸಂಪೂರ್ಣ ಮುಳುಗಡೆಯಾಗಿ ಆ ಭಾಗದ ಸುಮಾರು 3,000ಕ್ಕೂ ಹೆಚ್ಚು ಬಡ ಕುಟುಂಬಗಳು ನಿರಾಶ್ರಿತರಾಗಿ ಬೀದಿಗೆ ಬಿದ್ದಿದ್ದಾರೆ. ಇವರ ಪೈಕಿ ಬಹುತೇಕರಿಗೆ ಸರ್ಕಾರ ಈವರೇಗೂ ಕನಿಷ್ಠ ಸೂರನ್ನೂ ಕಲ್ಪಿಸದೆ, ಅಥವಾ ಪರಿಹಾರವನ್ನು ನೀಡದೆ ತೆಪ್ಪಗೆ ಕುಳಿತಿದೆ.
- ಯಲ್ಲಾಪುರದ ಕಳಚೆ ಎಂಬಲ್ಲಿ ಭೂಕುಸಿತದಿಂದಾಗಿ ಕಳೆದ ವರ್ಷ ಸುಮಾರು 115 ಹೆಚ್ಚು ಮನೆಗಳು ಸಂಪೂರ್ಣ ನಾಶವಾಗಿ ಆ ಕುಟುಂಬಗಳು ನರಳಾಡುತ್ತಿವೆ.
- ಉತ್ತರ ಕನ್ನಡ ಜಿಲ್ಲೆಯ ಅರಣ್ಯದಂಚಿನಲ್ಲಿ ವಾಸಿಸುತ್ತಿದ್ದ ಸುಮಾರು 80,000 ಮಂದಿ ಸ್ವಂತ ಸೂರಿಗಾಗಿ ಸಂಬಂಧಪಟ್ಟ ಇಲಾಖೆಗಳಿಗೆ ಅರ್ಜಿ ಸಲ್ಲಿಸುತ್ತಾ ಜಾತಕ ಪಕ್ಷಿಗಳಂತೆ ಕಾದುಕುಳಿತಿವೆ. ಈವರೆಗೂ ಅವರ ಅರ್ಜಿಗಳು ವಿಲೇವಾರಿಯಾಗದೆ ಹಾಗೆಯೇ ಸಂಬಂಧಪಟ್ಟ ಇಲಾಖೆಗಳ ಧೂಳು ಹಿಡಿದು ಅಸ್ತಮಾ ಪೀಡಿತವಾಗಿವೆ.
- ಕೊಪ್ಪಳದಲ್ಲಿ ತಲೆಯೆತ್ತಲಿರುವ ವಿದ್ಯುತ್ ಘಟಕದಿಂದ ಸಾವಿರಾರು ಮಂದಿ ಸೂರು ಕಳೆದುಕೊಂಡು ನಿರಾಶ್ರಿತರಾಗುವ ಹಂತದಲ್ಲಿದ್ದರೂ ನಮ್ಮ ಕನ್ನಡದ ಜನರ ಬಗ್ಗೆ ಎಳ್ಳಷ್ಟೂ ಕಾಳಜಿ ತೋರಿಸಲು ಮುಂದಾಗಿಲ್ಲ.
- ದಾವಣಗೆರೆಯ ಲೋಕಿಕೆರೆ ಕೈಗಾರಿಕಾ ಪ್ರದೇಶದಲ್ಲಿದ್ದ 36 ಮನೆಗಳನ್ನು ತೆರವುಗೊಳಿಸಿರುವುದರಿಂದ ಆ ಮನೆಗಳ ಕುಟುಂಬಸ್ಥರು ಬೀದಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ.

ಪರಿಸ್ಥಿತಿ ಹೀಗಿದ್ದರೂ ಗ್ಯಾರಂಟಿ ರಾಜ್ಯ ಸರಕಾರ ಇದಾವುದರ ಬಗ್ಗೆ ಗೊಡವೆಯೇ ಇಲ್ಲದಂತೆ ನಿಜವಾದ ನಿರಾಶ್ರಿತರ ಮತ್ತು ಸಂಕಷ್ಟಕ್ಕೆ ಒಳಗಾದವರ ಬಗ್ಗೆ ನೆರವಿಗೆ ಧಾವಿಸದೆ ಕಳ್ಳ ಕೋಗಿಲೆಗಳ 'ಕೋಗಿಲು' ಅಕ್ರಮ ಕೂಗಿಗೆ ಸ್ಪಂದಿಸಿದೆ. ಅಕ್ರಮವಾಸಿಗಳ ಮೇಲೆ ಇನ್ನಿಲ್ಲದ ಕಾಳಜಿ ತೋರಿಸಿ ಇಲ್ಲಿ ಸಮರೋಪಾದಿಯಲ್ಲಿ ಮನೆ ಕಟ್ಟಿಕೊಡಲು ಮುಂದಾಗಿರುವುದು ಕೇಡು ಕಾಲದ ಲಕ್ಷಣ ಎಂದು ರಾಜ್ಯದ ಜನರು ಇದೀಗ ಸರ್ಕಾರದ ವಿರುದ್ಧ ತೀವ್ರ ಆಕ್ರೋಶಿತರಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಒಟ್ಟಾರೆ ಇದು ಒಳ್ಳೆಯ ಬೆಳವಣಿಗೆ ಅಲ್ಲ.



## ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆ

ಕಸಾಪ ಸುಳ್ಯ ತಾಲೂಕು ಅಧ್ಯಕ್ಷ ಚಂದ್ರಶೇಖರ ಪೇರಾಲು ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಕ್ಕುಜಡ್ಕ ಚೊಕ್ಕಾಡಿ ಪ್ರೌಢಶಾಲೆಯ ಸಂಚಾಲಕ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷ ರಾಧಾಕೃಷ್ಣ ಬೊಳ್ಳೂರು ಸ್ವಾಗತಿಸಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಎಂ.ಪಿ.ಶ್ರೀನಾಥ ಸಮ್ಮೇಳನದ ಆಶಯ ನುಡಿಗಳನ್ನಾಡಿದರು. ನಿಕಟ ಪೂರ್ವಾಧ್ಯಕ್ಷೆ ಲೀಲಾ ದಾಮೋದರ ಮಾತನಾಡಿದರು.

ತಹಶೀಲ್ದಾರ್ ಮಂಜುಳ.ಎಂ ರವರು ಸಮ್ಮೇಳನದ ಕನ್ನಡ ಭುವನೇಶ್ವರಿಯ ಮೆರವಣಿಗೆಗೆ ಚಾಲನೆ ನೀಡಿ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ವಸ್ತು ಪ್ರದರ್ಶನ ಉದ್ಘಾಟಿಸಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ಶ್ರೀನಾಥ ಎಂ.ಪಿ. ಪರಿಷತ್ತಿನ ಧ್ವಜಾರೋಹಣ ನೆರವೇರಿಸಿದರು. ಕಸಾಪ ಸುಳ್ಯ ತಾಲೂಕು ಅಧ್ಯಕ್ಷ ಚಂದ್ರಶೇಖರ ಪೇರಾಲು ಕನ್ನಡ ಧ್ವಜಾರೋಹಣ ನೆರವೇರಿಸಿದರು. ಅಮರಮುನ್ನೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಜಾನಕಿ ಕಂದಡ್ಕ, ಸಮ್ಮೇಳನ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಕೃಷ್ಣ ಪ್ರಸಾದ್ ಮಾಡಬಾಕಿಲು, ಕೋಶಾಧಿಕಾರಿ ಅರುಣ ಕುಮಾರ ಮುಂಡಾಜೆ, ಕಸಾಪ ಗೌರವ ಕಾರ್ಯದರ್ಶಿಗಳಾದ ತೇಜಸ್ವಿ ಕಡಪಳ, ಚಂದ್ರಮತಿ ಕೆ, ಕೋಶಾಧಿಕಾರಿ ದಯಾನಂದ ಆಳ್ವ ಕಸಾಪ ಕೊಡಗು ಜಿಲ್ಲಾಧ್ಯಕ್ಷ ಕೇಶವ ಕಾಮತ್, ಸುಳ್ಯ ಹೋಬಳಿ ಅಧ್ಯಕ್ಷೆ ಚಂದ್ರಾವತಿ ಬಡ್ಡಡ್ಕ, ಪಂಜ ಹೋಬಳಿ ಅಧ್ಯಕ್ಷ ಬಾಬು ಗೌಡ ಅಚ್ಚಪ್ಪಾಡಿ ಉಪಸ್ಥಿತರಿದ್ದರು. ಸ್ಮರಣ ಸಂಚಿಕೆ ಕುರಿತು ಸಂಪಾದಕ ರಾಮಕೃಷ್ಣ ಭಟ್ ಚೂಂತಾರು ಮಾತನಾಡಿದರು. ಸಾಹಿತಿ ಎ.ಕೆ.ಹಿಮಕರ ಸಮ್ಮೇಳನಾಧ್ಯಕ್ಷರ ಪರಿಚಯ ಮಾತನಾಡಿದರು.

## ಮತ್ತೆ ನಂ.1 ಸ್ಥಾನದಲ್ಲಿ ಕುಕ್ಕಪ್ಪ!

ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ 2023–24ರಲ್ಲಿ 63.23 ಕೋಟಿ ಆದಾಯ ಬಂದಿತ್ತು. 2024–25ರಲ್ಲಿ 71.93 ಕೋಟಿಗೆ ತಲುಪಿದೆ. ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇಗುಲದ ಆದಾಯ ಕುಸಿದಿದೆ. 2023–24ರಲ್ಲಿ 56.67 ಕೋಟಿ ಆದಾಯ ಬಂದಿತ್ತು. ಅದೇ ಆದಾಯ 2024–25ರಲ್ಲಿ 50.68 ಕೋಟಿಗೆ ಕುಸಿದಿದೆ. ನಂಜನಗೂಡು ಶ್ರೀಕಂಠೇಶ್ವರ ದೇಗುಲದ ಆದಾಯ 30.36 ಕೋಟಿಯಿಂದ 36.12 ಕೋಟಿಗೆ ಏರಿಕೆ ಆಗಿದೆ. ಸವದತ್ತಿ ಯಲ್ಲಮ್ಮ ದೇಗುಲದ ಆದಾಯ 25.80 ಕೋಟಿಯಿಂದ 29.95 ಕೋಟಿಗೆ ಏರಿಕೆ ಆಗಿದೆ. ಯಡಿಯೂರು ಸಿದ್ಧಲಿಂಗೇಶ್ವರ ದೇಗುಲದ ಆದಾಯ 35.49 ಕೋಟಿಯಿಂದ 29.82 ಕೋಟಿಗೆ ಕುಸಿದಿದೆ. ಹುಲಿಗಿಯ ಹುಲಿಗೆಮ್ಮ ದೇಗುಲದ ಆದಾಯ 16.29 ಕೋಟಿಯಿಂದ 17.30 ಕೋಟಿಗೆ ಏರಿಕೆಯಾಗಿದೆ. ಮಂದಾರ್ತಿ ದುರ್ಗಾಪರಮೇಶ್ವರಿ ದೇಗುಲದ ಆದಾಯ 15.27 ಕೋಟಿಯಿಂದ 16.54 ಕೋಟಿಗೆ ಏರಿಕೆ ಕಂಡಿದೆ. ಘಾಟಿ ಸುಬ್ರಹ್ಮಣ್ಯ ದೇಗುಲದ ಆದಾಯ 12.73 ಕೋಟಿಯಿಂದ 13.31 ಕೋಟಿಗೆ ತಲುಪಿದೆ. ಬೆಂಗಳೂರಿನ ಬನಶಂಕರಿ ದೇಗುಲದ ಆದಾಯ 11.95 ಕೋಟಿಯಿಂದ 11.38 ಕೋಟಿಗೆ ಕುಸಿತ ಕಂಡಿದೆ.

## 54ನೇ ಉಚಿತ ಸಾಮೂಹಿಕ ವಿವಾಹ

ಈ ಸಂದರ್ಭ ವರನಿಗೆ ಧೋತಿ, ಶಾಲು ಮತ್ತು ವಧುವಿಗೆ ಸೀರೆ, ರವಿಕೆ ಕಣ ಹಾಗೂ ಮಂಗಳಸೂತ್ರ ಹಾಗೂ ಹೂವಿನ ಹಾರ ನೀಡಲಾಗುವುದು. ಈ ತನಕ ಒಟ್ಟು ಹದಿಮೂರು ಸಾವಿರ ಜೋಡಿ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಿದ್ದಾರೆ. ಧರ್ಮಸ್ಥಳದ ಈ ಸಾಮೂಹಿಕ ವಿವಾಹದಲ್ಲಿ ಮದುವೆ ಆಗಲಿಚ್ಛಿಸುವವರು 2026ರ ಏಪ್ರಿಲ್ 25 ರೊಳಗೆ ಸವಿವರ ಮಾಹಿತಿ ಹಾಗೂ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ದೂರವಾಣಿ 08256–266644. ವಾಟ್ಸಾಪ್ ನಂಬರ್: 9663464648, 8147263422.

## ಅಮ್ಮನ ಜತೆ ನೇಣು ಹಾಕುವ ಆಟ

**ಏನಿದು ನೇಣು ಬಿಗಿವ ಆಟ?:** ನಿನ್ನೆ ಸಂಜೆ ವಿಜಯ್ ಕುಮಾರ್ ಕಂಠಪೂರ್ತಿ ಕುಡಿದು ಮನೆಗೆ ಬಂದಿದ್ದ. ಬಂದವನೇ ತನ್ನ ಅಮ್ಮನ ಬಳಿ ಖರ್ಚಿಗೆ ಹಣ ಕೇಳಿದ್ದಾನೆ. ಆಕೆ ಕೊಡಲ್ಲ ಎಂದಿದ್ದಾಳೆ. ಇಷ್ಟಕ್ಕೆ ವಿಜಯ್ ಕುಮಾರ್ ಆತ್ಮಹತ್ಯೆ ಮಾಡಿಕೊಳ್ಳುತ್ತೀನಿ ಎಂದು ಬೆದರಿಕೆ ಹಾಕಿದ್ದಾನೆ. ಅಂತೆಯೇ ನೇಣಿನ ಕುಣಿಕೆಗೆ ಹಗ್ಗ ಹಾಕಿಕೊಳ್ಳುವಂತೆ ತಮಾಷೆ ಮಾಡಿ ನೇಣಿನ ಕುಣಿಕೆಗೆ ಸಿಲುಕಿಸಿದ್ದಾನೆ. ಆಗಿದ್ದು ಅಷ್ಟೇ. ಉಳಿದದ್ದು ದುರಂತ ಮಾತ್ರ. ತಮಾಷೆಗೆ ಅಂತ ಕುತ್ತಿಗೆಗೆ ಹಗ್ಗ ಹಾಕಿದ್ದು ಸಾವಾಗಿ ಪರಿಣಮಿಸಿದೆ. ತಪ್ಪಿಸಿಕೊಳ್ಳಲು ಆಗದೇ ಆತನಿಗೆ ಹಗ್ಗ ನೇಣಾಗಿ ಆತ ಮೃತಪಟ್ಟಿದ್ದಾನೆ. ವಿಜಯ್ ಕುಮಾರ್ ಪೋಷಕರ ಬಳಿ ಇದೇ ರೀತಿ ಹಲವು ಬಾರಿ ತಮಾಷೆ ಮಾಡಿದ್ದನಂತೆ. ಸಾವಿನ ವಿಚಾರದಲ್ಲಿ ಯಾಕೆ ಮಗಾ ತಮಾಷೆ, ಬೇಡ ಕಣೋ ಎಂದು ತಾಯಿ ಬುದ್ಧಿ ಹೇಳಿದ್ದರಂತೆ. ಆದ್ರೆ, ಸಾವಿನ ತಮಾಷೆ ನಿಜವಾಗಿದೆ. ನೇಣು ಕುಣಿಕೆಯಲ್ಲಿ ಒದ್ದಾಡಿ ಮಗ ಪ್ರಾಣ ಕಳೆದುಕೊಂಡಿದ್ದಾನೆ.

# ತೊಡಿಕಾನ ಪಡ್ಡು ಶ್ರೀ ಮಹಾವಿಷ್ಣುಮೂರ್ತಿ ದೈವದ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಸಂಪನ್ನ

• ಹೊಸಕನ್ನಡ ಸುಳ್ಯ

ತೊಡಿಕಾನ ಗ್ರಾಮದ ಪಡ್ಡು ಶ್ರೀ ಮಹಾವಿಷ್ಣುಮೂರ್ತಿ ದೈವದ ಪುನರ್ ಪ್ರತಿಷ್ಠಾ ಬ್ರಹ್ಮ ಕಲಶೋತ್ಸವ ದ. 28 ರಂದು ಅಲೆಟ್ಟಿ ಕುರಿಂಜ ತರವಾಡಿನ ರಾಮ ಮಣಿಯಾಣಿ ನೇತೃತ್ವದಲ್ಲಿ ನಡೆಯಿತು. ಬೆಳಿಗ್ಗೆ 7:00 ಯಿಂದ 8:00 ರಾ ಶುಭ ಮುಹೂರ್ತದಲ್ಲಿ ಶ್ರೀ ಮಹಾವಿಷ್ಣು ದೈವದ ಪುನರ್ ಪ್ರತಿಷ್ಟ ಕಾರ್ಯಕ್ರಮ ನೂರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

ಪುನರ್ ಪ್ರತಿಷ್ಠೆ ಬಳಿಕ ಮಹಾಪೂಜೆ, ಪ್ರಸಾದ ವಿತರಣೆ, ದೈವದ ತಂಬಿಲ ನಡೆಯಿತು. ಬ್ರಹ್ಮಕಲಶದ ಪ್ರಯುಕ್ತ ನಡೆದ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಚಂದ್ರಶೇಖರ ಬಾಳೆಕಜೆ



ವಹಿಸಿದ್ದರು. ಶಾಸಕಿ ಭಾಗೀರಥಿ ಮುರುಳ್ಯ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಪೂವಪ್ಪ ಕಣಿಯೂರು ಧಾರ್ಮಿಕ ಉಪನ್ಯಾಸ ನೀಡಿದರು.

ದೈವಜ್ಞರಾದ ಕಲ್ಲಾರು ಬಾಲಕೃಷ್ಣ ಜೋಯಿಸರು, ಗ್ರಾಮ ಪಂಚಾಯತ್ ಅಧ್ಯಕ್ಷ ಕೇಶವ ಅಡ್ತಲೆ, ಉಪಾಧ್ಯಕ್ಷೆ ಭವಾನಿ ಚಿಟ್ಟನ್ನೂರು, ತೊಡಿಕಾನ ಮಲ್ಲಿಕಾರ್ಜುನ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಕೊಳಲುಮೂಲೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಮಾಧವ ಗೌಡ, ದೈವಸ್ಥಾನದ ವ್ಯವಸ್ಥಾಪನಾ ಟ್ರಸ್ಟ್ ಅಧ್ಯಕ್ಷ ಕೆ ಕೆ ನಾರಾಯಣ, ಜಿ. ಪಂ. ಮಾಜಿ ಸದಸ್ಯ ಹರೀಶ್ ಕಂಜಿಪಿಲಿ, ಗ್ರಾಮ ಪಂಚಾಯತ್ ಸದಸ್ಯರಾದ ರವೀಂದ್ರ ಪಂಜಿಕೋಡಿ, ಶಶಿಧರ ದೊಡ್ಡಕುಮೇರಿ, ದೈವಸ್ಥಾನದ ಗೌರವಾಧ್ಯಕ್ಷರಾದ ಪದ್ಮಯ್ಯ ಗೌಡ ಪಡ್ಡು ವೇದಿಕೆಯಲ್ಲಿದ್ದರು.

## ಪಂಜ ಸ. ಪ. ಪೂ. ಕಾಲೇಜಿನ ಅಮೃತ ಪಥ ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಸುಬ್ರಾಯ ಚೊಕ್ಕಾಡಿ



• ಹೊಸಕನ್ನಡ ಸುಳ್ಯ

ಪಂಜ ಸರಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿ ಸುಬ್ರಾಯ ಚೊಕ್ಕಾಡಿ ಅವರು ಡಿ.28 ರಂದು ಪಂಜ ಸರಕಾರಿ ಪದವಿ ಪೂರ್ವ ಕಾಲೇಜಿನ ಅಮೃತ ಪಥ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ''ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಶಿಕ್ಷಣ ಮಕ್ಕಳಲ್ಲಿ ವ್ಯಕ್ತಿತ್ವವನ್ನು ರೂಪಿಸುತ್ತದೆ. ಅಂದಿನ ದಿನ ಈ ಶಾಲೆಯ ನಿರ್ಮಾಣದಲ್ಲಿ ಅನೇಕರ ಬೆವರ ಹನಿಯಿದೆ. ಇಲ್ಲಿ ಕಲಿತವರು ಪದ್ಮಶ್ರೀ ಪುರಸ್ಕಾರ ಸ್ವೀಕರಿಸಿದ್ದಾರೆ. ಅನೇಕ ಉನ್ನತ ಉದ್ಯೋಗ, ಹುದ್ದೆಗಳಲ್ಲಿದ್ದಾರೆ. ಅಮೃತ ಪಥ ಅಭಿವೃದ್ಧಿ ಪಥವಾಗಲಿ ಎಂದು ಹಿರಿಯ ಸಾಹಿತಿ ಚೊಕ್ಕಾಡಿ ಹೇಳಿದ್ದಾರೆ. ಕರ್ನಾಟಕ ಸರಕಾರದ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷರಾದ ಟಿ. ಎಂ. ಶಹೀದ್ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿ ಮಾತನಾಡಿ ''ಅಂದಿನ ಕಷ್ಟಕರ ದಿನಗಳಲ್ಲಿ ಈ ಶಿಕ್ಷಣ ಸಂಸ್ಥೆಯನ್ನು ನಿರ್ಮಿಸುವಲ್ಲಿ ಹಿರಿಯರು ಬಹಳಷ್ಟು ಶ್ರಮಿಸಿದ್ದಾರೆ. ಉತ್ತಮ ಶಿಕ್ಷಣ ಸಂಸ್ಥೆಗಳು ಇದ್ದಾಗ ಊರಿನ ಅಭಿವೃದ್ಧಿಯಾಗುತ್ತದೆ'' ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಅಧ್ಯಕ್ಷ ಡಾ.ರೇಣುಕಾಪ್ರಸಾದ್ ಕೆ.ವಿ. ಯವರು ಮಾತನಾಡಿ ದೇವರ ನಾಡಿನ ಮಧ್ಯೆ ಪಂಜದ ಪವಿತ್ರ ಶಿಕ್ಷಣ ಸಂಸ್ಥೆಯಿದೆ. ಹಿಂದಿನ ಗುರು ಶಿಷ್ಯ ಸಂಬಂಧಗಳು ಮುಂದುವರಿಯಬೇಕು.'' ಎಂದು ಹೇಳಿದರು. ಇನ್ನೋರ್ವ ಮುಖ್ಯ ಅತಿಥಿಯಾಗಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಸೂಫಿ ಪೆರಾಜೆ ಪಾಲ್ಗೊಂಡಿದ್ದರು. ಅಮೃತ ಪಥ ಸಮಿತಿ ಅಧ್ಯಕ್ಷ ಜಾಕೆ ಮಾಧವ ಗೌಡ ಸಭಾಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಅಮೃತ ಪಥ ಸಮಿತಿ ಪ್ರಧಾನ ಕಾರ್ಯದರ್ಶಿ ಸವಿತಾರ ಮುಡೂರು, ಪ್ರಧಾನ ಸಂಚಾಲಕ ಚಿನ್ನಪ್ಪ ಸಂಕಡ್ಕ, ಕಾರ್ಯದರ್ಶಿ ಗುರು ಪ್ರಸಾದ್ ತೋಟ, ಖಜಾಂಜಿ ಜಯರಾಮ ಕಂಬಳ, ಶಾಲಾ ಮುಖ್ಯೋಪಾಧ್ಯಾಯ ದೇವಿ ಪ್ರಸಾದ್ ಎ, ಪ್ರಾಂಶುಪಾಲ ಚಿದಾನಂದ ಕೆ, ಕಾಲೇಜು ಅಭಿವೃದ್ಧಿ ಸಮಿತಿ ಕಾರ್ಯಾಧ್ಯಕ್ಷ ಸುಚಿನ್ನ ಕಾಣಿಕೆ, ಎಸ್ ಡಿಎಂಸಿ ಅಧ್ಯಕ್ಷ ಸೋಮಶೇಖರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕಾಣೆಯಾಗಿದ್ದ ರಾಜೇಶ್ ಪಿ. ಶವ ಬಲಿಪೆ ನೇತ್ರಾವತಿ ನದಿಯಲ್ಲಿ ಪತ್ತೆ

• ಹೊಸಕನ್ನಡ ಬೆಳ್ತಂಗಡಿ

ಕಾಣೆಯಾಗಿದ್ದ ಗ್ರಾಮದ ಪುರುಷರಬೆಟ್ಟು ನಿವಾಸಿ ರಾಜೇಶ್ ಪಿ.(30ವ) ಅವರ ಪಾರ್ಥಿವ ಶರೀರ ಬೆಳಾಲು ಗ್ರಾಮದ ಬಲಿಪೆ ನೇತ್ರಾವತಿ ನದಿಯಲ್ಲಿ ಪತ್ತೆಯಾಗಿದೆ. ಡಿ. 27ರಂದು ಬೆಳಿಗ್ಗೆ ಮನೆಯಿಂದ ಹೊರಗೆ ಹೋದವರು ವಾಪಾಸು ಹಿಂದಿರುಗದೆ ನಾಪತ್ತೆಯಾಗಿದ್ದರು. ರಾಜೇಶ್ ಪಿ. ರವರ ಪತ್ತೆಗಾಗಿ ಮನೆಯವರು ಹಾಗೂ ಸ್ಥಳೀಯರು ಹುಡುಕಾಟ ನಡೆಸಿದ್ದರು. ಆದರೂ ಪತ್ತೆಯಾಗಿರಲಿಲ್ಲ. ನಾಪತ್ತೆ ಬಗ್ಗೆ ಧರ್ಮಸ್ಥಳ ಪೊಲೀಸರಿಗೆ ಮಾಹಿತಿ ನೀಡಿ ನಂತರ ಹುಡುಕಾಟ ಮುಂದುವರೆದಿತ್ತು. ಇದೀಗ, ಡಿ.30ರಂದು ಬೆಳಿಗ್ಗೆ ಬಲಿಕೆಯ ನೇತ್ರಾವತಿ ನದಿಯಲ್ಲಿ ಶವವಾಗಿ ಪತ್ತೆಯಾಗಿದೆ. ಮೃತರು ತಂದೆ ಜಿನ್ನಪ್ಪ ಗೌಡ, ತಾಯಿ ಚನ್ನಕ್ಕ, ಸಹೋದರ ಪ್ರಶಾಂತ್ ಮತ್ತು ಸಹೋದರಿ ಗೀತಾರನ್ನು ಅಗಲಿದ್ದಾರೆ.

## ಕಾರು ಬೈಕು ಅಪಘಾತ, ಕುಕ್ಕಾಜೆ ನಿವಾಸಿ ಇಮ್ರಾನ್ ಮಂಚಿ ಮೃತ

• ಹೊಸಕನ್ನಡ ಪುಂಜಾಲಕಟ್ಟೆ:

ಪಿಲತಬೆಟ್ಟು ಎಂಬಲ್ಲಿ ಕಾರು ಮತ್ತು ಬೈಕ್ ಅಪಘಾತವಾದ ನಡೆದ ಘಟನೆ ಡಿ. 29ರಂದು ನಡೆದಿದೆ. ಬೈಕ್ ಸವಾರ ಕುಕ್ಕಾಜೆ ನಿವಾಸಿ ಇಮ್ರಾನ್ ಮಂಚಿ( 40ವ) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಮೃತರು ಟಾಟಾ ಕಂಪನಿಯ ಡಿಶ್ ರಿಪೇರಿ ಟೆಕ್ನಿಷಿಯನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಅವರು ಕಾರ್ಯ ನಿಮಿತ್ತ ತೆರಳಿದವರು ವಾಪಾಸು ಬಿ.ಸಿ.ರೋಡ್ ಕಡೆ ಬರುತ್ತಿದ್ದರು. ಮಂಗಳೂರು ಕಡೆಯಿಂದ ಪೊಲೀಸ್ ಓರ್ವರು ಚಲಾಯಿಸುತ್ತಿದ್ದ ನ್ಯಾನೋ ಕಾರು ನಿಯಂತ್ರಣ ತಪ್ಪಿ ಹೆಗ್ಗಡೆಬೆಟ್ಟು ಮನೆ ಬಳಿ ಬೈಕ್‌ಗೆ ಡಿಕ್ಕಿಯಾಗಿದೆ. ಮೃತರು ಪತ್ನಿ ಮತ್ತು ಮಕ್ಕಳನ್ನು ಅಗಲಿದ್ದಾರೆ.



## ಸ್ಥಳೀಯರಿಂದ ಪಿಐಎಲ್: ಮುಗೆರೋಡಿ ಕನ್‌ಸ್ಟ್ರಕ್ಷನ್ಸ್ ಹಾಟ್ ಮಿಕ್ಸ್ ಘಟಕಕ್ಕೆ ಹೈಕೋರ್ಟ್ ನೋಟೀಸ್

• ಹೊಸಕನ್ನಡ ಬೆಳ್ತಂಗಡಿ

ನಡ ಗ್ರಾಮದ ಮಲೆಯಡ್ಕ ಸಮೀಪ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಜನವಸತಿ ಬಳಿ ಕಾರ್ಯ ನಿರ್ವಹಿಸುತ್ತಿರುವ ಮುಗೆರೋಡಿ ಕನ್‌ಸ್ಟ್ರಕ್ಷನ್ಸ್‌ನ ಹಾಟ್ ಮಿಕ್ಸ್ ಘಟಕಕ್ಕೆ ಹೈಕೋರ್ಟ್ ನೋಟೀಸ್ ಜಾರಿ ಮಾಡಿದೆ. ಪರಿಸರ ಮಾಲಿನ್ಯದಿಂದ ತೊಂದರೆಯಾಗುತ್ತಿರುವ ಕುರಿತು ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಈ ಆಜ್ಞೆ ಹೊರಡಿಸಿದ್ದಾರೆ. ಉಜಿರೆ-ಸುರ್ಯ ರಸ್ತೆಯಲ್ಲಿ, 2008ರಿಂದ ಕಾರ್ಯ ನಿರ್ವಹಿಸುತ್ತಿರುವ ಮುಗೆರೋಡಿ ಕನ್‌ಸ್ಟ್ರಕ್ಷನ್ಸ್‌ನ ಮಿಕ್ಸಿಂಗ್ ಘಟಕದಿಂದ ಕಲುಷಿತ ನೀರು, ಹೊಗೆ ಬಿಡಲಾಗುತ್ತಿದೆ. ಇಲ್ಲಿ ತ್ಯಾಜ್ಯದ ಅಸಮರ್ಪಕ ನಿರ್ವಹಣೆ ಮಾಡಲಾಗುತ್ತಿದೆ, ಗ್ರಾಮೀಣ ರಸ್ತೆಯಲ್ಲಿ ಸಾಗುವ ಕಂಪನಿಯ ಭಾರೀ ಟ್ರಕ್‌ನಿಂದ ಜನಸಾಮಾನ್ಯ ಹಾಗೂ ನಿತ್ಯ ಪ್ರಯಾಣಿಕರ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ ಎಂದು ಮಲೆಯಡ್ಕ, ಇಚ್ಚಾವು ಮತ್ತು ಕೋಡಿಜಾಲು ನಿವಾಸಿಗಳು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅಲ್ಲದೆ, ಈ ಪ್ರದೇಶದಲ್ಲಿ ಸಂಜೆಯ ಹೊತ್ತು ಉಂಟಾಗುವ ಕಮಟು ವಾಸನೆಯಿಂದ ಜನರ ಉಸಿರಾಟಕ್ಕೆ ಕಷ್ಟವಾಗುತ್ತಿದೆ. ಸ್ಥಳೀಯರು ಗಂಭೀರ ಸಮಸ್ಯೆಗೆ ಒಳಗಾಗಿದ್ದಾರೆ. ಮಕ್ಕಳು, ವೃದ್ಧರಲ್ಲಿ ಅಸ್ತಮಾ, ಹೃದೋಗ ಸಮಸ್ಯೆಗಳು ತಲೆದೋರಿವೆ ಅರ್ಜಿಯಲ್ಲಿ ತಿಳಿಸಲಾಗಿತ್ತು ಎನ್ನಲಾಗಿದೆ. ಹೆಚ್ಚಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು ನೆಲೆಸಿರುವ ಹಾಗೂ ಸಾಮಾನ್ಯ ಕೂಲಿ ಕಾರ್ಮಿಕರಿರುವ ಈ ಜನವಸತಿ ಪ್ರದೇಶದಲ್ಲಿ ಭಾರೀ ಪ್ರಮಾಣದ ಕೈಗಾರಿಕೆ ಕಾರ್ಯ ನಿರ್ವಹಿಸುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಮುಗೆರೋಡಿ ಹಾಟ್ ಮಿಕ್ಸ್ ಘಟಕ, ಸರ್ಕಾರದ ಮುಖ್ಯ ಕಾರ್ಯದರ್ಶಿ, ತಹಶೀಲ್ದಾರ್ ಬೆಳ್ತಂಗಡಿ, ಜಿಲ್ಲಾಧಿಕಾರಿ ದ.ಕ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ನಡ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ನೋಟೀಸ್ ಜಾರಿ ಮಾಡಿದೆ.




# ಟಿಇಟಿ ಪರೀಕ್ಷೆಯಲ್ಲಿ 56 ಅಭ್ಯರ್ಥಿಗಳು ಉತ್ತೀರ್ಣ

• ಹೊಸಕನ್ನಡ ಸುಳ್ಯ

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2025ರ ಫಲಿತಾಂಶ ಬಿಡುಗಡೆಯಾಗಿದ್ದು, ವಿದ್ಯಾಮಾತಾ ಅಕಾಡೆಮಿಯಲ್ಲಿ ತರಬೇತಿ ಪಡೆದ 56 ಅಭ್ಯರ್ಥಿಗಳು ಉತ್ತೀರ್ಣರಾಗಿ ಅರ್ಹತೆಯನ್ನು ಪಡೆದಿರುತ್ತಾರೆ, ಪ್ರಸ್ತುತ ಶಾಲೆಗಳಲ್ಲಿ ಉದ್ಯೋಗದಲ್ಲಿರುವ ಅತಿಥಿ ಶಿಕ್ಷಕರು ಹಾಗೂ ಸರಕಾರಿ ಶಿಕ್ಷಕರು ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಪರೀಕ್ಷೆಯನ್ನು ಬರೆದಿದ್ದು, ಇಲ್ಲಿ ಶಿಕ್ಷಕರೇ ವಿದ್ಯಾರ್ಥಿಗಳಾಗಿದ್ದು ವಿಶೇಷವೆನಿಸಿದೆ.

ಕಠಿಣ ಮತ್ತು ನಿರಂತರ ಪರಿಶ್ರಮದ ಜೊತೆಗೆ ವಿದ್ಯಾಮಾತಾ ಅಕಾಡೆಮಿಯ ಮೂಲಕ ದಿನ ಮತ್ತು ರಾತ್ರಿ ಹೊತ್ತು ನಿರ್ವಹಿಸುವ ಆನ್ಲೈನ್ ಲೈವ್ ತರಗತಿಗಳ ಮೂಲಕ ಈ ಗಣನೀಯ ಸಾಧನೆ ಮಾಡಿದ್ದು, ವಿದ್ಯಾಮಾತಾ ಅಕಾಡೆಮಿಯ ಆಡಳಿತ ನಿರ್ದೇಶಕರಾದ ಭಾಗ್ಯಶ್ ರೈ ಮತ್ತು ತರಬೇತುದಾರರ ತಂಡ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಶಿಕ್ಷಕರ ಅರ್ಹತಾ ಪರೀಕ್ಷೆಯ ಮಹತ್ವ ಈ ವರ್ಷದ ಶಿಕ್ಷಕರ ಅರ್ಹತಾ ಪರೀಕ್ಷೆಗೆ ಅತ್ಯಂತ ಮಹತ್ವ, ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಸರಕಾರಿ ಶಿಕ್ಷಕರ ನೇಮಕಾತಿಗಳಾದ GPSTR ,HSTR, PSTR ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ. 2025ನೇ ಸಾಲಿನ ಅರ್ಹತಾ ಪರೀಕ್ಷೆಯ ಪೂರ್ವ ಸಿದ್ಧತಾ ತರಬೇತಿಯ ಜೊತೆಗೆ ಪ್ರತಿನಿತ್ಯ ಅಣುಕು ಪರೀಕ್ಷೆ ವಿಷಯಾಧಾರಿತ ತರಗತಿ ನಡೆಸಿ, ಅಗತ್ಯ ಅಧ್ಯಯನ ಸಾಮಾಗ್ರಿ ಒದಗಿಸಿ ವಿದ್ಯಾರ್ಥಿಗಳಿಗಿರುವ ಗೊಂದಲಗಳನ್ನು ನಿವಾರಿಸಿ ಪರಿಣಾಮಕಾರಿಯಾಗಿ ತರಬೇತಿ ನಡೆಸಿದ ಕೀರ್ತಿ ವಿದ್ಯಾಮಾತಾ ಅಕಾಡೆಮಿಗೆ ಸಲ್ಲುತ್ತದೆ. ತಹಶೀಲ್ದಾರ್, ಮಂಗಳೂರಿಗೆ ಮೀಟಿಂಗ್‌ಗೆ ತೆರಳಿದ ಕಾರಣ ಉಪ ತಹಶೀಲ್ದಾರ್ ಮನವಿ ಸ್ವೀಕರಿಸಲು ಆಗಮಿಸಿದರು. ರೈತರು ಮುಂದಿರಿಸಿದ ಕೆಲವೊಂದು ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರ ಬಾರದೇ ಇದ್ದ ಕಾರಣ ತಹಶೀಲ್ದಾರ್ ಅಥವಾ ಸಹಾಯಕ ಕಮೀಷನರ್ ಆಗಮಿಸಿ ಮಾಹಿತಿ ನೀಡಿ ಮನವಿ ಸ್ವೀಕರಿಸಬೇಕು ಎಂದು ಒತ್ತಾಯಿಸಿ ಧರಣಿ ಮುಂದುವರಿಸಿದ್ದಾರೆ. ಈ ಸಂದರ್ಭ ಮಲೆನಾಡು ಜನ ಹಿತರಕ್ಷಣಾ ವೇದಿಕೆಯ ಪದಾಧಿಕಾರಿಗಳು, ಪ್ರಮುಖರು ಉಪಸ್ಥಿತರಿದ್ದರು

### ಬೆಳೆವಿಮೆ ಪರಿಹಾರ ತಾರತಮ್ಯ

**ತಹಶೀಲ್ದಾರ್ ಬರಲೇ ಬೇಕೆಂದು ಪಟ್ಟು ತಾಲೂಕಿನಲ್ಲಿ ಬೆಳೆವಿಮೆ ಪರಿಹಾರ ವಿತರಣೆಯಲ್ಲಿ ತಾರತಮ್ಯ ಆಗಿರುವುದನ್ನು ವಿರೋಧಿಸಿ ಮಲೆನಾಡು ಜನ ಹಿತರಕ್ಷಣಾ ವೇದಿಕೆಯ ವತಿಯಿಂದ ಡಿ.24ರಂದು ಸುಳ್ಯ ತಾಲೂಕು ಕಛೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯ ಕೊನೆಯಲ್ಲಿ ಪ್ರತಿಭಟನಾಕಾರರು ನೀಡಿದ ಮನವಿಯನ್ನು ಸ್ವೀಕರಿಸಲು ತಹಶೀಲ್ದಾರ್'ರೇ ಬರಬೇಕು ಎಂದು ಪಟ್ಟು ಹಿಡಿದು ತಾಲೂಕು ಕಚೇರಿ ಮುಂದೆ ಧರಣಿ ಕುಳಿತು ಪ್ರತಿಭಟನೆ ಮುಂದುವರಿಸಿದ್ದಾರೆ.**

## ಜಟ್ಟಿಪಳ್ಳ: ಕೆವಿಜಿ ಸುಳ್ಯ ಹಬ್ಬ ಸಮಾಜ ಸೇವಾ ಸಂಘದ ಸಹಾಯಾನುದಾನದ '5 ನೇ ಮನೆ' ಹಸ್ತಾಂತರ

• ಹೊಸಕನ್ನಡ ಸುಳ್ಯ

ಡಾ. ಕುರುಂಜಿ ವೆಂಕಟ್ರಮಣ ಗೌಡರ 97 ನೇ ಜಯಂತ್ಯೋತ್ಸವದ ಅಂಗವಾಗಿ ಸಮಾಜ ಸೇವಾ ಕಾರ್ಯ ವಿಭಾಗದಲ್ಲಿ ಜಟ್ಟಿಪ್ಪಳ್ಳ ನಿವಾಸಿ ದಿ.ಬಾಬುರವರ ಪತ್ನಿ ಕಮಲರವರಿಗೆ ಮನೆ ನಿರ್ಮಾಣ ಪೂರ್ತಿಗೊಳಿಸಲು ರೂ 1 ಲಕ್ಷ ಸಹಾಯ ದಾನ ನೀಡಲಾಗಿದ್ದು, ಸಹಾಯದೊಂದಿಗೆ ಪೂರ್ಣಗೊಂಡ ಮನೆಯ ಹಸ್ತಾಂತರ ಕಾರ್ಯಕ್ರಮ ಡಿ.26 ರಂದು ನಡೆಯಿತು. ಕೆವಿಜಿ ಸುಳ್ಯ ಹಬ್ಬ ಸಮಾಜ ಸೇವಾ ಸಂಘದ ಸ್ಥಾಪಕಾಧ್ಯಕ್ಷರಾದ ಎನ್. ಜಯಪ್ರಕಾಶ್ ರೈ ನಾಮಫಲಕ ಅನಾವರಣಗೊಳಿಸಿ ಲೋಕಾರ್ಪಣೆಗೊಳಿಸಿದರು.

## ಶ್ರೀ ವಸಂತ ಬಂಗೇರರ 80ನೇ ಹುಟ್ಟುಹಬ್ಬ ಆಚರಣೆ

• ಹೊಸಕನ್ನಡ ಬೆಳ್ತಂಗಡಿ

ಕಾಲೇಜಿನ ಸಂಸ್ಥಾಪಕ, ಮಾಜಿ ಶಾಸಕ ಶ್ರೀ ವಸಂತ ಬಂಗೇರರವರ 80ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಬೆಳ್ತಂಗಡಿ ತಾಲೂಕಿನ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಗುರು ವಸಂತ ಎಂಬ ಹೆಸರಲ್ಲಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗುರುದೇವ ಎಜುಕೇಶನಲ್ ಟ್ರಸ್ಟ್ ಇದರ ಅಧ್ಯಕ್ಷೆ ಶ್ರೀಮತಿ ಪ್ರೀತಿತಾ ಧರ್ಮವಿಜೇತ್ ರವರು ವಹಿಸಿದ್ದರು. 'ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ತಮ್ಮ ತಂದೆಯವರ 80ನೇ ಹುಟ್ಟುಹಬ್ಬದ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಂಡಿದ್ದೇವೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಲು ಸೂಕ್ತ ವೇದಿಕೆಯನ್ನು ನಿರ್ಮಾಣ ಮಾಡಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ತಮ್ಮ ತಂದೆ ಕೆ ವಸಂತ ಬಂಗೇರರು ಶ್ರೀ ಗುರುದೇವ ಕಾಲೇಜಿನ, ಜಿಲ್ಲೆಯ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗಾಗಿ ಮತ್ತು ಯಾರೊಬ್ಬರು ಕೂಡ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಈ ಕಾಲೇಜನ್ನು ಕಟ್ಟಿ ಬೆಳೆಸಿದ್ದಾರೆ, ಅವರು ಒಳ್ಳೆಯ ಉದ್ದೇಶದಿಂದ ಸ್ಥಾಪಿಸಿದ ಕಾಲೇಜು ಹೆಮ್ಮರವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

## ಸುಳ್ಯ ಶ್ರೀದುರ್ಗಾ ಪರಮೇಶ್ವರಿ ಕಲಾ ಮಂದಿರದಲ್ಲಿ ದತ್ತ ಆರಾಧನಾ ಮಹೋತ್ಸವ



• ಹೊಸಕನ್ನಡ ಸುಳ್ಯ

ದತ್ತ ಜಯಂತಿ ಸೇವಾ ಟ್ರಸ್ಟ್ ಆಶ್ರಯದಲ್ಲಿ, ಸುಳ್ಯದ ದತ್ತ ಭಕ್ತರು ಸೇರಿ ಸುಳ್ಯದ ಶ್ರೀ ದುರ್ಗಾಪರಮೇಶ್ವರಿ ಕಲಾಮಂದಿರದಲ್ಲಿ ಡಿ 28ರಂದು ದತ್ತ ಆರಾಧನಾ ಮಹೋತ್ಸವವು ಶ್ರದ್ಧಾಭಕ್ತಿಯಿಂದ ನೆರವೇರಿತು.

ಸುಳ್ಯದ ಶ್ರೀನಾಥ್ ರವರ ನೇತೃತ್ವದಲ್ಲಿ ನಡೆದ ಈ ಪೂಜಾ ಕಾರ್ಯಕ್ರಮದಲ್ಲಿ ಗಾಣಗಾಪುರದಿಂದ ಬಂದ ಪುರೋಹಿತರು ದತ್ತ ಪೂಜೆಯನ್ನು ನೆರವೇರಿಸಿದರು.

ಸುಳ್ಯ ಮಾತ್ರವಲ್ಲದೆ ಜಿಲ್ಲೆಯ ಹಾಗೂ ಹಾಸನ, ಚಿಕ್ಕಮಗಳೂರು, ಕೊಡಗು, ಉಡುಪಿ ಮೊದಲಾದ ಜಿಲ್ಲೆಗಳ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಪೂಜೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

## ಡಾ. ಯುಪಿ. ಶಿವಾನಂದ, ಬಾಪೂ ಸಾಹೇಬ್ ರವರಿಗೆ ಕೆ. ವಿ. ಜಿ. ಸಾಧನಾ ಶ್ರೀ ಪ್ರಶಸ್ತಿ ಪ್ರದಾನ



• ಹೊಸಕನ್ನಡ ಸುಳ್ಯ

**ಕೆವಿಜಿ ಸುಳ್ಯ ಹಬ್ಬ**

ಸುಳ್ಯದ ಶಿಲ್ಪಿ ಕೆ. ವಿ. ಜಿ. ಸುಳ್ಯ ಹಬ್ಬ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ಡಾ। ಕುರುಂಜಿ ವೆಂಕಟ್ರಮಣ ಗೌಡರ 97ನೇ ಜಯಂತ್ಯೋತ್ಸವ ಕೆ. ವಿ. ಜಿ ಸುಳ್ಯ ಹಬ್ಬ 2025 ರ ಸಮಾರೋಪ ಸಮಾರಂಭವು ಡಿ. 25 ರಂದು ನಡೆಯಿತು. ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಶನ್ ಇದರ ಅಧ್ಯಕ್ಷರಾದ ಡಾ. ಕೆ. ವಿ. ಚಿದಾನಂದರವರು ಅಧ್ಯಕ್ಷತೆ ವಹಿಸಿದ್ದರು. ಸುದ್ದಿ ಬಿಡುಗಡೆ ಪತ್ರಿಕೆಯ ಸಂಪಾದಕ ಡಾ. ಯು. ಪಿ. ಶಿವಾನಂದ ಹಾಗೂ ಸಮಾಜಸೇವಕ ಬಾಪೂ ಸಾಹೇಬ್ ರವರಿಗೆ ಕೆ. ವಿ. ಜಿ. ಸಾಧನಾ ಶ್ರೀ ಪ್ರಶಸ್ತಿ ಪ್ರದಾನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಬಾಲಚಂದ್ರ, ಗೌಡರವರು ಕೆ. ವಿ. ಜಿ ಯವರ ಸಂಸ್ಮರಣಾ ಭಾಷಣ ಮಾಡಿದರು.

## ಅರಂತೋಡು ನಿವೃತ್ತ ರೇಂಜರ್ ಹೂವಯ್ಯ ಗೌಡ ನೆನಪಿನ ಬುತ್ತಿ ಕೃತಿ 'ಹಿನ್ನೋಟ' ಅನಾವರಣ

• ಹೊಸಕನ್ನಡ ಸುಳ್ಯ

ಅರಂತೋಡಿನ ನಿವೃತ್ತ ರೇಂಜರ್ ಹೂವಯ್ಯ ಗೌಡ ಉಳುವಾರು ಅವರ ಬದುಕು ಹಾಗೂ ವೃತ್ತಿ ಬದುಕನ್ನು ಪರಿಚಯಿಸುವ ಅಭಿನಂದನಾ ಗ್ರಂಥ ''ಹಿನ್ನೋಟ- ಇದು ನೆನಪಿನ ಬುತ್ತಿ'' ಯ ಅನಾವರಣ ಕಾರ್ಯಕ್ರಮವು ಇತ್ತೀಚೆಗೆ ಸಾಂದೀಪ್ ವಿಶೇಷ ಮಕ್ಕಳ ಶಾಲೆಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಲಕೃಷ್ಣ ಗೌಡ ಮೂಲೆಮನೆ ವಹಿಸಿದ್ದರು. ಕಾರ್ಯಕ್ರಮವನ್ನು ನಿವೃತ್ತ ಪ್ರಾಂಶುಪಾಲರಾದ ಕೆ ಆರ್ ಗಂಗಾಧರ ಉದ್ಘಾಟಿಸಿದರು. ಎಂ ಬಿ ಫೌಂಡೇಶನ್ ಅಧ್ಯಕ್ಷರಾದ ಎಂ ಬಿ ಸದಾಶಿವ ಕೃತಿಯನ್ನು ಅನಾವರಣಗೊಳಿಸಿದರು.

ಮುಖ್ಯ ಅತಿಥಿಗಳಾಗಿ ಕೃತಿಯ ಸಂಪಾದಕರಾದ ಡಾ. ಅನುರಾಧಾ ಕುರುಂಜಿ, ಸಾಂದೀಪ್ ಶಾಲೆಯ ಮುಖ್ಯ ಶಿಕ್ಷಕಿ ಹರಿಣಿ ಸದಾಶಿವ, ತರಬೇತುದಾರ ಚಂದ್ರಶೇಖರ ಬಿಳಿನೆಲೆ, ಎಂ ಬಿ ಫೌಂಡೇಶನ್ ಟ್ರಸ್ಟಿ ನೇತ್ರಾವತಿ ಪಡ್ಡಂಬೈಲು,




ಕೋಶಾಧಿಕಾರಿ ಪುಷ್ಪಲತಾ ರಾಧಾಕೃಷ್ಣ ಮಾಣಿಬೆಟ್ಟು ಮೊದಲಾದವರು ಉಪಸ್ಥಿತರಿದ್ದರು. ಡಾ. ರಮ್ಯಾ ಅವರು ಪ್ರಾರ್ಥಿಸಿದ ಕಾರ್ಯಕ್ರಮದಲ್ಲಿ ಯಶೋಧ ಹೂವಯ್ಯ ಸ್ವಾಗತಿಸಿ, ದಿಲೀಪ್ ಕುಮಾರ್ ಉಳುವಾರು ಪ್ರಾಸ್ತಾವಿಕವಾಗಿ ಮಾತನಾಡಿ, ಪುರುಷೋತ್ತಮ ಉಳುವಾರು ವಂದಿಸಿದರು. ಭಾರತಿ ಪುರುಷೋತ್ತಮ ಉಳುವಾರು ಕಾರ್ಯಕ್ರಮ ನಿರೂಪಿಸಿದರು. ಮಾನಸ ದಿಲೀಪ್, ಅಶ್ವಿನಿ ಪ್ರದೀಪ್, ಯು ಸಿ ಕುಸುಮಾಧರ ಸಹಕರಿಸಿದರು. ಕಾರ್ಯಕ್ರಮದಲ್ಲಿ ಉಳುವಾರು ಮನೆತನದವರು, ಹೂವಯ್ಯ ಗೌಡರ ಬಂಧುಗಳು, ಆಹ್ವಾನಿತರು, ಶಾಲಾ ಶಿಕ್ಷಕರು, ಮಕ್ಕಳು ಮೊದಲಾದವರು ಭಾಗವಹಿಸಿದ್ದರು.ಈ ಸಂದರ್ಭದಲ್ಲಿ ಅರೆಭಾಷೆ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ ಆರ್ ಗಂಗಾಧರ ಹಾಗೂ ಕೃತಿಯ ಸಂಪಾದಕರಾದ ಡಾ. ಅನುರಾಧಾ ಕುರುಂಜಿ ಮತ್ತು ಚಂದ್ರಶೇಖರ ಬಿಳಿನೆಲೆ ಯವರನ್ನು ಹೂವಯ್ಯ ಗೌಡ ದಂಪತಿಗಳು ಅಭಿನಂದಿಸಿದರು.

# ಚಲಿಸುವ ವ್ಯಾನಿನಲ್ಲಿ 2 ಗಂಟೆ ರೇಪ್, ಬಳಿಕ ಎಸೆದು ಹೋದ ಕಟುಕರು

ಫರಿದಾಬಾದ್: ಮತ್ತೆ ನಿರ್ಭಯ ಮಾದರಿಯ ವ್ಯಾನ್ ರೇಪ್ ನಡೆದಿದೆ. ಫರಿದಾಬಾದ್‌ನಲ್ಲಿ ಚಲಿಸುವ ವ್ಯಾನ್‌ನಲ್ಲಿ ಮಹಿಳೆಯನ್ನು 2 ಗಂಟೆಗಳ ಕಾಲ ಸಾಮೂಹಿಕ ಅತ್ಯಾಚಾರ ಮಾಡಿ, ರಸ್ತೆಗೆ ಎಸೆದ ಘಟನೆ ನಡೆದಿದೆ. ಮಹಿಳೆಯನ್ನು ಸುಮಾರು ಎರಡೂವರೆ ಗಂಟೆಗಳ ಕಾಲ ವ್ಯಾನ್‌ನಲ್ಲಿ ಇರಿಸಲಾಗಿತ್ತು, ಅಲ್ಲಿ ಆರೋಪಿಗಳು ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇದೀಗ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೋಮವಾರ ಮತ್ತು ಮಂಗಳವಾರ ಮಧ್ಯದ ಮಧ್ಯರಾತ್ರಿ ವಿವಾಹಿತ ಮಹಿಳೆ ಮನೆಗೆ ಹೋಗಲು ವಾಹನಕ್ಕಾಗಿ ಕಾಯುತ್ತಿದ್ದಳು. ಆ ಸಮಯ ಒಂದು ವ್ಯಾನ್ ಬಂದು ನಿಂತು, ಆಕೆಯನ್ನು ಆಕೆಯನ್ನು ಮನೆಗೆ ಬಿಡುವುದಾಗಿ ವಾಹನಕ್ಕೆ



ಹತ್ತಿಸಿಕೊಂಡರು. ಆಕೆ ಒಳಕ್ಕೆ ಬಂದು ಕೂತ ಸ್ವಲ್ಪ ಹೊತ್ತಿನ ನಂತರ ಆ ವಾಹನ ರಸ್ತೆ ಬದಲಿಸಿತ್ತು. ಗುರ್ಗಾಂವ್ ರಸ್ತೆಯ ಕಡೆಗೆ ವ್ಯಾನ್ ಸಾಗಿತು. ವ್ಯಾನ್ ತನ್ನ ದಾರಿ ಬದಲಿಸಿದ್ದು ಆಕೆಯ ಗಮನಕ್ಕೆ ಬಂದಿದೆ. ಆದರೆ ಅವರಲ್ಲೊಬ್ಬ ಆಕೆಯ ದೇಹಕ್ಕೆ ಕೈ ಹಾಕಿದ್ದ.

**ನಿರ್ಭಯಾ ಮಾದರಿ ಅತ್ಯಾಚಾರ**

ಹಾಗೆ 28 ವರ್ಷದ ಈ ಮಹಿಳೆ ಸುಮಾರು ಎರಡೂವರೆ ಗಂಟೆಗಳ ಕಾಲ ವ್ಯಾನ್‌ನಲ್ಲಿದ್ದರು. ಅಲ್ಲಿ ಆರೋಪಿಗಳು ಆಕೆಯ ಮೇಲೆ ಅತ್ಯಾಚಾರ ನಡೆಸಿದ್ದಾರೆ. ಆಕೆ ಎಷ್ಟೇ ಪ್ರತಿರೋಧ ಒಡ್ಡಿದರೂ ಆರೋಪಿಗಳು ತಮ್ಮ ಕಾಮ ದಾಹ ತೀರಿಸಿಕೊಂಡಿದ್ದಾರೆ. ಬೆಳಗಿನ ಜಾವ ಸುಮಾರು 3 ಗಂಟೆ ಸುಮಾರಿಗೆ, ಎಸ್‌ಜಿಎಂ ನಗರದ ರಾಜಾ ಚೌಕ್ ಬಳಿ ಚಲಿಸುತ್ತಿದ್ದ ವ್ಯಾನ್‌ನಿಂದ ಮಹಿಳೆಯನ್ನು ಹೊರಗೆ ಎಸೆಯಲಾಯಿತು. ಈ ಸಂದರ್ಭ ಮಹಿಳೆಯ ಮುಖಕ್ಕೆ ತೀವ್ರ ಗಾಯಗಳಾಗಿದ್ದು, ವಿಪರೀತ ರಕ್ತಸ್ರಾವವಾಗುತ್ತಿತ್ತು. ಅದೃಷ್ಟವಶಾತ್ ಆಕೆಯ ಜೀವ ಹೋಗಿರಲಿಲ್ಲ. ಆಕೆಯಲ್ಲಿ ಕ್ಷೀಣ ಪ್ರಜ್ಞೆ ಉಳಿದಿತ್ತು.

ಹಾಗೆ ವ್ಯಾನ್'ನಿಂದ ಬಿದ್ದ ಮಹಿಳೆ ತನ್ನ ಸಹೋದರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾಳೆ. ತಕ್ಷಣ ಆಕೆಯ ಕುಟುಂಬ ಸದಸ್ಯರು ಸ್ಥಳಕ್ಕೆ ಧಾವಿಸಿ ಮಹಿಳೆಯ ಸ್ಥಿತಿ ಗಂಭೀರವಾಗಿದ್ದು ಆಸ್ಪತ್ರೆಗೆ ದಾಖಲಿಸಿದ್ದಾರೆ. ಮಹಿಳೆ ವಿವಾಹಿತಳಾಗಿದ್ದು, ಆಕೆಗೆ ಮೂವರು ಮಕ್ಕಳಿದ್ದಾರೆ. ಕೌಟುಂಬಿಕ ಕಲಹದಿಂದಾಗಿ ಪತಿಯಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಈಕೆಯನ್ನು ಅತ್ಯಾಚಾರ ಮಾಡಿರುವ ಆರೋಪಿಗಳಿಬ್ಬರನ್ನೂ ಬಂಧಿಸಲಾಗಿದೆ.

## ಜೇಬಿನಲ್ಲೇ ಪಿಸ್ತೂಲ್‌ನಿಂದ ಗುಂಡು ಸಿಡಿದು ಸಾವು



• ಹೊಸ ಕನ್ನಡ ನ್ಯೂಸ್ ಅಮೃತಸರ

ಅನಿವಾಸಿ ಭಾರತೀಯ ಪ್ರಜೆಯ ಸೊಂಟದಲ್ಲಿದ್ದ ಗನ್ ನಿಂದ ಆಕಸ್ಮಿಕವಾಗಿ ಗುಂಡು ಸಿಡಿದು ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಂಜಾಬ್ ನಲ್ಲಿ ವರದಿಯಾಗಿದೆ. ಪಂಜಾಬ್‌ನ ಫಿರೋಜ್‌ಪುರ ಜಿಲ್ಲೆಯಲ್ಲಿ ಸೋಮವಾರ ಸೋಫಾದಿಂದ ಎದ್ದೇಳುತ್ತಿದ್ದಾಗ ಸೊಂಟದಲ್ಲಿದ್ದ ಗನ್ ನಿಂದ ಆಕಸ್ಮಿಕವಾಗಿ ಗುಂಡು ಸಿಡಿದು ಹರ್ಪಿಂದರ್ ಸಿಂಗ್ ಅಲಿಯಾಸ್ ಸೋನು ಎಂಬಾತ ಸಾವನ್ನಪ್ಪಿದ್ದಾರೆ. ಹರ್ಪಿಂದರ್ ಸಿಂಗ್ ಅಲಿಯಾಸ್ ಅನಿವಾಸಿ ಭಾರತೀಯರಾಗಿದ್ದು, ಇತ್ತೀಚೆಗೆ ಸ್ವಗ್ರಾಮಕ್ಕೆ ಆಗಮಿಸಿದ್ದರು. ವಿದೇಶದಿಂದ ಹಿಂದಿರುಗಿ ವಿವಾಹವಾದ ಹರ್ಪಿಂದರ್ ಸಿಂಗ್ ಗೆ 2 ವರ್ಷದ ಮಗಳಿದ್ದಾಳೆ.

## ಎಮ್ಮೆ ಕಚ್ಚಿದ ರೇಬಿಸ್ ನಾಯಿ; ಹಾಲು ಕುಡಿದ ಗ್ರಾಮಸ್ಥರು ಆಸ್ಪತ್ರೆ ಪಾಲು



ಉತ್ತರ ಪ್ರದೇಶದ ಬುಡೌನ್ ಜಿಲ್ಲೆಯಲ್ಲಿ ಶಂಕಿತ ಕ್ರೋಧೋನ್ಮತ್ತ ನಾಯಿ ಕಚ್ಚಿದ ಕೆಲವು ದಿನಗಳ ನಂತರ ಎಮ್ಮೆ ಸಾವಿಗೀಡಾಗಿದ್ದು, ಇದರಿಂದ ಭಯಗೊಂಡ ಗ್ರಾಮಸ್ಥರು ಮುನ್ನೆಚ್ಚರಿಕೆಯಿಂದ ರೇಬೀಸ್ ಲಸಿಕೆಗಾಗಿ ಓಡಿದ್ದು, ಇದು ಗ್ರಾಮದಲ್ಲಿ ಭೀತಿಯನ್ನುಂಟುಮಾಡಿತು.

ಪಿಪ್ರೌಲ್ ಗ್ರಾಮಸ್ಥರ ಪ್ರಕಾರ, ಡಿಸೆಂಬರ್ 23 ರಂದು ಟೆರಾಹ್ವಿನ್ ಆಚರಣೆಯ ಭಾಗವಾಗಿ ಸಮುದಾಯ ಹಬ್ಬವನ್ನು ಆಯೋಜಿಸಲಾಗಿತ್ತು, ಇದರಲ್ಲಿ ಎಮ್ಮೆಯ ಹಾಲಿನಿಂದ ತಯಾರಿಸಿದ ಸಿಹಿಯನ್ನು ಹೆಚ್ಚಿನ ಜನರು ಸೇವಿಸಿದ್ದರು. ಕೆಲವು ದಿನಗಳ ನಂತರ, ಹಾಲು ನೀಡಿದ ಎಮ್ಮೆಯನ್ನು ನಾಯಿ ಕಚ್ಚಿತ್ತು ಎಂದು ತಿಳಿದುಬಂದಿದೆ. ಈ ಪ್ರಾಣಿಯು ರೇಬೀಸ್‌ಗೆ ಅನುಗುಣವಾದ ಲಕ್ಷಣಗಳನ್ನು ಹೊಂದಿದ್ದು, ಡಿಸೆಂಬರ್ 26 ರಂದು ಸಾವನ್ನಪ್ಪಿದೆ ಎಂದು ವರದಿಯಾಗಿದೆ. ಈ ಸುದ್ದಿಯು ಗ್ರಾಮಸ್ಥರಲ್ಲಿ ಸೋಂಕಿನ ಬಗ್ಗೆ ವ್ಯಾಪಕ ಭಯವನ್ನುಂಟುಮಾಡಿತು. ಕಳೆದ ಶನಿವಾರ, ಪುರುಷರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉಜಾನಿ ಸಮುದಾಯ ಆರೋಗ್ಯ ಕೇಂದ್ರವನ್ನು ತಲುಪಿ ತಡೆಗಟ್ಟುವ ರೇಬೀಸ್ ಚುಚ್ಚುಮದ್ದನ್ನು ಹಾಕಿಸಿದ್ದಾರೆ. ಕುದಿಸಿದ ಹಾಲಿನ ಮೂಲಕ ರೇಬಿಸ್ ಹರಡುವುದು ಸಾಮಾನ್ಯವಾಗಿ ಅಸಂಭವವಾಗಿದೆ ಎನ್ನಲಾಗಿದೆ. ಆದರೆ ಲಸಿಕೆ ತೆಗೆದುಕೊಳ್ಳುವುದು ಸೂಕ್ತ ಮತ್ತು ಹಾನಿಕಾರಕವಲ್ಲ ಎಂದು ವೈದ್ಯರು ಹೇಳಿದ್ದಾರೆ.

## ಶಸ್ತ್ರಚಿಕಿತ್ಸೆ: ಎಚ್ಚರವಾಗುತ್ತಿದ್ದಂತೆ ಮಾತಾಡಿದ್ದು ವಿದೇಶಿ ಭಾಷೆ

ನೆದರ್ಲ್ಯಾಂಡ್: ಮೊಣಕಾಲು ನೋವು ಎಂದು ಆಸ್ಪತ್ರೆಗೆ ದಾಖಲಾಗಿದ್ದ ಯುವಕನಿಗೆ ಶಸ್ತ್ರಚಿಕಿತ್ಸೆ ನಡೆದಿದೆ. ಶಸ್ತ್ರಚಿಕಿತ್ಸೆ ಬಳಿಕ ಬಾಲಕನು ಯಾವುದೋ ವಿದೇಶಿ ಭಾಷಾ ಮಾತನಾಡಿ ಎಲ್ಲರನ್ನೂ ಬೆರಗುಗೊಳಿಸಿದ್ದಾನೆ. ಅಷ್ಟೇ ಅಲ್ಲದೆ ಆತ ತನ್ನ ಹೆತ್ತವರನ್ನು ಕೂಡ ಗುರುತು ಹಿಡಿಯಲಿಲ್ಲವಂತೆ.

ನೆದರ್ಲ್ಯಾಂಡ್ ನಲ್ಲಿ 17 ವರ್ಷದ ಹುಡುಗ ಫುಟ್ಬಾಲ್ ಆಡುವಾಗ ಗಾಯಗೊಂಡು ಮೊಣಕಾಲಿನ ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿತ್ತು ಮತ್ತು ಆತ ಆರೋಗ್ಯವಾಗಿದ್ದ. ತಕ್ಷಣ ಯಾವುದೇ ತೊಂದರೆಯಾಗಲಿಲ್ಲ. ಆತನ ಮಾತೃಭಾಷೆ ಡಚ್. ಆದರೆ ಎಚ್ಚರವಾದಾಗ ಅವನು ಶಾಲೆಯಲ್ಲಿ ಪ್ರಾಥಮಿಕವಾಗಿ ಬಳಸುತ್ತಿದ್ದ ಇಂಗ್ಲಿಷ್ ಭಾಷೆಯನ್ನು ಮಾತ್ರ ಮಾತನಾಡುತ್ತಿದ್ದ. ಪೋಷಕರ ಗುರುತನ್ನೂ ಹಿಡೀಲಿಲ್ಲ, ಇದು ಎಲ್ಲರಿಗೂ ಆತಂಕವನ್ನುಂಟು ಮಾಡಿತ್ತು.

ಬಳಿಕ ಪರೀಕ್ಷಿಸಿದಾಗ ಹುಡುಗನಿಗೆ ಯಾವುದೇ ರೀತಿಯ ಮಾನಸಿಕ ಸಮಸ್ಯೆಗಳು ಇಲ್ಲ ಎಂಬುದು ತಿಳಿದಿದೆ. ಇದು ವಿದೇಶಿ ಭಾಷಾ ಸಿಂಡ್ರೋಮ್ (ಈಐಖ) ಎಂದು ಗುರುತಿಸಿದರು. ಈ ಸ್ಥಿತಿಯಲ್ಲಿ ರೋಗಿಗಳು ಇದ್ದಕ್ಕಿದ್ದಂತೆ, ತಮಗೆ ಗೊತ್ತಿಲ್ಲದೆ ತಮ್ಮ ಮಾತೃಭಾಷೆಯ ಬದಲಿಗೆ ಬೇರೆ ಭಾಷೆಯನ್ನು ಮಾತನಾಡಲು ಶುರು ಮಾಡುತ್ತಾರೆ ಎಂದು ವೈದ್ಯರು ಹೇಳಿದ್ದಾರೆ.

## ಜಿಡಿಪಿಯಲ್ಲಿ ಜಪಾನ್ ಹಿಂದಿಕ್ಕಿ 4ನೇ ಸ್ಥಾನಕ್ಕೆ ಏರಿದ ಭಾರತ

• ಹೊಸ ಕನ್ನಡ, ನವದೆಹಲಿ

ಆರ್ಥಿಕ ಸುಧಾರಣೆಗಳಿಂದ ಭಾರತ ಜಪಾನ್ ಹಿಂದಿಕ್ಕಿ ನಾಲ್ಕನೇ ಸ್ಥಾನಕ್ಕೆ ಜಿಗಿದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಹೌದು ವಿಶ್ವದ ನಾಲ್ಕನೇಯ ಅತಿ ದೊಡ್ಡ ಆರ್ಥಿಕತೆಯನ್ನು ಹೊಂದಿದ ದೇಶವಾಗಿ ಭಾರತ ಹೊರಹೊಮ್ಮಿದೆ.

ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಗಾತ್ರವು 4.18 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. 4.18 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ, ಭಾರತವು ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು ಮುಂದಿನ 2.5 ರಿಂದ 3 ವರ್ಷಗಳಲ್ಲಿ ಜರ್ಮನಿಯನ್ನು ಹಿಂದಿಕ್ಕಲಿದೆ. 2030ರ ವೇಳೆಗೆ 7.3 ಟ್ರಿಲಿಯನ್ ಡಾಲರ್ ಜಿಡಿಪಿ ಹೊಂದಿದ ದೇಶವಾಗಲಿದೆ ಎಂದಿದೆ. ದೇಶೀಯ ಬೇಡಿಕೆ, ವಿದೇಶಿ ಹೂಡಿಕೆ, ಹಣದುಬ್ಬರ ಇಳಿಕೆ, ನಿರುದ್ಯೋಗ ಇಳಿಕೆ, ರಫ್ತು ಹೆಚ್ಚಳ ಕಾರಣದಿಂದ ದೇಶದ ಜಿಡಿಪಿ ದರ ಏರಿಕೆಗೆ ಪರಿಸ್ಥಿತಿಗಳು ಅನುಕೂಲಕರವಾಗಿವೆ ಎಂದು ಸರ್ಕಾರ ತಿಳಿಸಿದೆ.

| ಯಾವ ದೇಶದ ಜಿಡಿಪಿ ಗಾತ್ರ ಎಷ್ಟು? (ಟ್ರಿಲಿಯನ್ ಡಾಲರ್) ನಲ್ಲಿ | | |
|---|---|---|
| 1 | ಅಮೆರಿಕ | 30.507 |
| 2 | ಚೀನಾ | 19.213 |
| 3 | ಜರ್ಮನಿ | 4.744 |
| 4 | ಭಾರತ | 4.744 |
| 5 | ಜಪಾನ್ | 4.186 |
| 6 | ಯುಕೆ | 3.839 |
| 7 | ಫ್ರಾನ್ಸ್ | 3.211 |
| 8 | ಇಟಲಿ | 2.422 |
| 9 | ಕೆನಡಾ | 2.225 |
| 10 | ಬ್ರೆಜಿಲ್ | 2.125 |

# ಬೇಕಲ್ ಬೀಚ್ ಉತ್ಸವ ಕಾಲ್ತುಳಿತ; ಓರ್ವ ಸಾವು

ಕಾಸರಗೋಡು: ಕೇರಳದ ಕಾಸರಗೋಡು ಜಿಲ್ಲೆಯ ಬೇಕಲ್ ಬೀಚ್ ಉತ್ಸವದಲ್ಲಿ ಮಲಯಾಳಂ ರ?ಯಾಪರ್ ವೇದನ್ ಅವರ ಸಂಗೀತ ಕಚೇರಿಯ ಸಂದರ್ಭದಲ್ಲಿ ಕಾಲ್ತುಳಿತ ಉಂಟಾಗಿದ್ದು, ಮಕ್ಕಳು ಸೇರಿದಂತೆ ಹಲವು ಗಾಯಗೊಂಡಿದ್ದಾರೆ. ಇದೇ ವೇಳೆ ರೈಲೊಂದು ಡಿಕ್ಕಿ ಹೊಡೆದ ಪರಿಣಾಮ ಓರ್ವ ಯುವಕ ಸಾವನಪ್ಪಿದ್ದಾನೆ ಎಂದು ವರದಿಯಾಗಿದೆ.




ಪೊಯಿನಾಚಿಯ ಶಿವಾನಂದ (19) ಮೃತಪಟ್ಟವರು. ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಮಕ್ಕಳು , ಹಿರಿಯರು ಸೇರಿದಂತೆ ಹಲವು ಮಂದಿ ಕುಸಿದು ಬಿದ್ದ ಘಟನೆಯೂ ನಡೆದಿದೆ.


ಈ ಕಾರ್ಯಕ್ರಮವನ್ನು ಬೇಕಲ್ ಪಾರ್ಕ್ ಪಕ್ಕದ ಸ್ಥಳದಲ್ಲಿ ಆಯೋಜಿಸಲಾಗಿತ್ತು. ವೇದನ್ ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕಿಂತ ಬಹಳ ತಡವಾಗಿ ಆಗಮಿಸಿದ್ದರು. ಆ ಹೊತ್ತಿಗೆ ಸ್ಥಳದಲ್ಲಿ 25,000ಕ್ಕೂ ಹೆಚ್ಚು ಜನ ಸೇರಿದ್ದರು ಎಂದು ಹೇಳಲಾಗಿದೆ. ಭಾರೀ ಜನಸಂದಣಿಯು ಪಾರ್ಕ್ ಸಮೀಪದ ರೈಲ್ವೆ ಹಳಿ ತನಕ ತಲುಪಿತ್ತು. ಈ ಸಂದರ್ಭ ನೂಕು ನುಗ್ಗಲು ಉಂಟಾಗಿ ಹಲವು ಮಂದಿ ಅಡ್ಡಾದಿಡ್ಡಿ ಓಡಿದ್ದಾರೆ. ಈ ಸಂದರ್ಭ ರೈಲು ಬಡಿದು ಶಿವಾನಂದ ಎಂಬವರು ಮೃತಪಟ್ಟಿದ್ದಾರೆ. ಶಿವಾನಂದರ ಜೊತೆಗಿದ್ದ ಇನ್ನೋರ್ವನಿಗೂ ರೈಲು ಬಡಿದಿದೆ ಎನ್ನಲಾಗಿದೆ.

## ಮೇಲೆ ಬಿದ್ದ ಟ್ರಕ್, ಬೊಲೆರೋ ಸಹಿತ ಚಾಲಕ ಅಪ್ಪಚ್ಚಿ

ಉತ್ತರ ಪ್ರದೇಶ: ಉತ್ತರ ಪ್ರದೇಶದ ರಾಂಪುರದಲ್ಲಿ ಭೀಕರ ರಸ್ತೆ ಅಪಘಾತ ನಡೆದಿದ್ದು ಬೊಲೆರೋ ವಾಹನ ಚಾಲಕ ಸ್ಥಳದಲ್ಲೇ ಮೃತಪಟ್ಟ ಘಟನೆ ಭಾನುವಾರ (ಡಿ.28)ಸಂಜೆ ನಡೆದಿದೆ. ಲಾರಿಯ ಕೆಳಗೆ ಬೊಲೆರೋ ಅಪ್ಪಚ್ಚಿಯಾಗಿದೆ.

ಹೊಟ್ಟು ತುಂಬಿದ್ದ ಲಾರಿಯೊಂದು ಹೆದ್ದಾರಿಯಲ್ಲಿ ಬರುತ್ತಿತ್ತು. ಈ ವೇಳೆ ಅದೇ ಮಾರ್ಗದಲ್ಲಿ ಸಾಗುತ್ತಿದ್ದ ಬೊಲೆರೋ ಹಿಂದಿನಿಂದ ಬರುತ್ತಿದ್ದ ಟ್ರಕ್ ನ್ನು ಗಮನಿಸದೇ ಸ್ವಲ್ಪ ಬಲಕ್ಕೆ ತಿರುಗಿಸಿದ್ದಾನೆ. ಈ ವೇಳೆ ಹಿಂದಿದ್ದ ಟ್ರಕ್ ಚಾಲಕ ಬೊಲೆರೋಗೆ ಢಿಕ್ಕಿಯನ್ನು ತಪ್ಪಿಸಲು ಯತ್ನಿಸಿದ್ದಾನೆ. ಆದರೆ ಟ್ರಕ್ ಮಧ್ಯದಲ್ಲಿದ್ದ ಡಿವೈಡರ್ ಗೆ ಡಿಕ್ಕಿ ಹೊಡೆದು ಬೊಲೆರೋ ಮೇಲೆ ಪಲ್ಟಿಯಾಗಿ ಬಿದ್ದಿದೆ. ಪರಿಣಾಮ ಬೊಲೆರೋ ಸಹಿತ ಚಾಲಕ ಸಂಪೂರ್ಣ ಅಪ್ಪಚ್ಚಿಯಾಗಿದ್ದು, ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಕ್ರೇನ್ ಮೂಲಕ ಟ್ರಕ್ ಅನ್ನು ಮೇಲಕ್ಕೆತ್ತಿ ವಾಹನದೊಳಗಿದ್ದ ಚಾಲಕನ ಮೃತದೇಹವನ್ನು ಹೊರತೆಗೆಯಲಾಯಿತು. ಘಟನೆಯ ವಿಡಿಯೋ ಭಯ ಹುಟ್ಟಿಸುವಂತಿದೆ.

## ಆನ್‌ಲೈನ್‌ನಿಂದ ಅಶ್ಲೀಲ ವಿಷಯ ತೆಗೆಯಿರಿ: ಕೇಂದ್ರದಿಂದ ಎಚ್ಚರಿಕೆ



• ಹೊಸ ಕನ್ನಡ ನ್ಯೂಸ್ ನವದೆಹಲಿ

ಆನ್ಸೆನ್ ವೇದಿಕೆಗಳಿಂದ ಅಶ್ಲೀಲ, ಮಕ್ಕಳ ಮೇಲಿನ ದೌರ್ಜನ್ಯ ವಿಷಯಗಳನ್ನು ತೆಗೆದುಹಾಕುವಂತೆ ಕೇಂದ್ರ ಸೂಚಿಸಿದೆ. ತತ್‌ಕ್ಷಣ ಕ್ರಮ ಕೈಗೊಳ್ಳದಿದ್ದರೆ ಕಠಿನ ಕಾನೂನು ಕ್ರಮದ ಎಚ್ಚರಿಕೆ ನೀಡಿದೆ. 'ಸಾಮಾಜಿಕ ಮಾಧ್ಯಮ ಸೇರಿ, ಎಲ್ಲ ಆನ್ ಲೈನ್ ವೇದಿಕೆಗಳಲ್ಲಿ ಅಪ್‌ಲೋಡ್ ಆಗಿರುವ ಕಾನೂನುಬಾಹಿರ ವಿಷಯಗಳನ್ನು ತತ್‌ಕ್ಷಣ ತೆಗೆದುಹಾಕಬೇಕು. ಐಟಿ ಕಾಯ್ದೆಯ 79ನೇ ಸೆಕ್ಷನ್ ಕಾನೂನುಗಳನ್ನು ಪಾಲಿಸಬೇಕು. ತಪ್ಪಿದರೆ ಐಟಿ ಕಾಯ್ದೆ ಬಿಎನ್‌ಎಸ್ ಹಾಗೂ ಇತರ ಕ್ರಿಮಿನಲ್ ಕಾನೂನುಗಳಡಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯ ಪ್ರಕಟನೆ ಹೊರಡಿಸಿದೆ.




## ನೋವು ನಿವಾರಕ ನಿಮುಸುಲೈಡ್ ನಿಷೇಧ

ಹೊಸದಿಲ್ಲಿ: ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ 100 ಎಂಜಿಗೆ ಮೇಲ್ಪಟ್ಟ ನಿಮುಸುಲೈಡ್ ನೋವು ನಿವಾರಕ ಮಾತ್ರೆಗಳ ಮೇಲೆ ಕೇಂದ್ರ ಸರಕಾರ ನಿಷೇಧ ಹೇರಿದೆ. ನೋವು ನಿವಾರಕ ಅಂಶ ಒಳಗೊಂಡ ನಿಮುಸುಲೈಡ್ ಬಳಕೆ, ಉತ್ಪಾದನೆ, ಮಾರಾಟವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕೇಂದ್ರ ಆರೋಗ್ಯ ಸಚಿವಾಲಯ ನಿಷೇಧಿಸಿದೆ.

ಜನರ ಆರೋಗ್ಯದ ಮೇಲೆ ಗಂಭೀರ ಸಮಸ್ಯೆ ಉಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ನಿಷೇಧದ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಶಿಫಾರಸಿನಂತೆ 1940ರ ಔಷಧ ಮತ್ತು ಸೌಂದರ್ಯವರ್ಧಕ ಕಾಯಿದೆಯ ಸೆಕ್ಷನ್ 26 'ಎ' ಅಡಿಯಲ್ಲಿ ನಿಷೇಧಿಸಲಾಗಿದೆ.

## ಸಾಧು ಸಂತರ ವಿರೋಧ: ಸೆಕ್ಸಿ ಸನ್ನಿ ನ್ಯೂ ಇಯರ್ ಕಾರ್ಯಕ್ರಮ ರದ್ದು

• ಹೊಸ ಕನ್ನಡ ನ್ಯೂಸ್ ಲಕ್ನೋ



ಬಾಲಿವುಡ್ ನ ಅಶ್ಲೀಲ ನಟಿ ಸನ್ನಿ ಲಿಯೋನ್ ನ ಉತ್ತರಪ್ರದೇಶದ ಮಥುರಾದ ರೆಸ್ಟೋರೆಂಟ್ ಒಂದರಲ್ಲಿ ನಡೆಯಬೇಕಿದ್ದ ಹೊಸ ವರ್ಷಾಚರಣೆ ಕಾತ್ಯಕ್ರಮ ಕೊನೇ ಕ್ಷಣದಲ್ಲಿ ರದ್ದಾಗಿದೆ. ಶ್ರೀಕೃಷ್ಣ ಜನ್ಮಭೂಮಿ ಸಂಘರ್ಷನ್ಯಾಸ್ ಸೇರಿ, ಸಾಧುಸಂತರು, ಧಾರ್ಮಿಕ ಸಂಘಟನೆಗಳ ವಿರೋಧದ ಹಿನ್ನೆಲೆ ಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಮಥುರಾದ ಧಾರ್ಮಿಕ, ಸಾಂಸ್ಕೃತಿಕ ಪಾವಿತ್ರ್ಯ ಕಾಪಾಡಬೇಕು ಎಂದು ವಿರೋಧಿಗಳು ಆಗ್ರಹಿಸಿದ್ದರು.

## ರೈಲ್ ಒನ್ ಆ್ಯಪ್: ಟಿಕೆಟ್ ಬುಕ್ಕಿಂಗ್‌ಗೆ 3% ಡಿಸ್ಕೌಂಟ್

• ಹೊಸ ಕನ್ನಡ ನ್ಯೂಸ್ ಹೊಸದಿಲ್ಲಿ

ಆನ್‌ಲೈನ್‌ನಲ್ಲಿ ರೈಲು ಟಿಕೆಟ್ ಕೊಳ್ಳುವವರ ಪ್ರಮಾಣ ಹೆಚ್ಚಿಸಲು ಭಾರತೀಯ ರೈಲ್ವೇ, 'ರೈಲ್ ಒನ್' ಆ?ಯಪ್ ಬಳಸಿ ಟಿಕೆಟ್ ಕೊಂಡರೆ ಶೇ.3ರಷ್ಟು ರಿಯಾಯಿತಿ ಕೊಡುವುದಾಗಿ ಘೋಷಿಸಿದೆ. ಈ ಅವಕಾಶ ಜ.14ರಿಂದ ಜು.14ರ ವರೆಗೆ ಜಾರಿಯಲ್ಲಿದೆ ಎಂದು ಇಂಡಿಯನ್ ರೈಲ್ವೇ ತಿಳಿಸಿದೆ.




ಈಗಾಗಲೇ ಆರ್- ವ್ಯಾಲೆಟ್ ಅಥವಾ ರೈಲ್ ಒನ್ ಆ?ಯಪ್ ಬಳಸಿ ಟಿಕೆಟ್ ಬುಕ್ ಮಾಡುವವರಿಗೆ ಶೇ.3ರಷ್ಟು ಕ್ಯಾಶ್ ಬ್ಯಾಕ್ ನೀಡಲಾಗುತ್ತಿದೆ. ಇದನ್ನು ಮುಂದುವರಿಸಲಾಗುತ್ತದೆ. ಹೆಚ್ಚುವರಿಯಾಗಿ ಇನ್ನೂ ರಿಯಾಯಿತಿ ನೀಡಲಾಗುವುದು ಎಂದು ಪ್ರಕಟನೆಯಲ್ಲಿ ತಿಳಿಸಿದೆ. ಈ ಎಲ್ಲ ಆಫರ್ ಗಳು ಕೇವಲ ಕಾಯ್ದಿರಿಸದ ಟಿಕೆಟ್‌ಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ರೈಲ್ವೇ ತಿಳಿಸಿದೆ.

## ವಿಮಾನದಲ್ಲಿ ಸಹ ಪ್ರಯಾಣಿಕರ ಮೇಲೆ ಮೂತ್ರ ಮಾಡಿದ ವ್ಯಕ್ತಿ

• ಹೊಸ ಕನ್ನಡ ನ್ಯೂಸ್ ನವದೆಹಲಿ



ದೆಹಲಿಯಿಂದ ಬ್ಯಾಂಕಾಕ್ ಗೆ ಹೊರಟಿದ್ದ ಏರ್‌ಇಂಡಿಯಾ ವಿಮಾನದಲ್ಲಿ ಪಾನಮತ್ತ ಪ್ರಯಾಣಿಕನೋರ್ವ ಸಹ ಪ್ರಯಾಣಿಕನ ಮೇಲೆ ಮೂತ್ರ ಮಾಡಿರುವ ಘಟನೆ ನಡೆದಿದೆ. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಕುಡುಕ ಪ್ರಯಾಣಿಕನೊಬ್ಬ ವಿಮಾನ ಕ್ಯಾಬಿನ್ ಒಳಗೆ ಮೂತ್ರ ವಿಸರ್ಜಿಸುತ್ತಿರುವುದನ್ನು ತೋರಿಸುತ್ತದೆ. ಬಿಸಿನೆಸ್ ಕ್ಲಾಸ್ ಕ್ಯಾಬಿನ್‌ನಲ್ಲಿ ಪ್ರಯಾಣ ಮಾಡುತ್ತಿದ್ದು, ಸಹ ಪ್ರಯಾಣಿಕರಲ್ಲಿ ಒಬ್ಬರಾದ ಶಿವಮ್ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಇಡೀ ಘಟನೆಯ ಕುರಿತು ಬರೆದಿದ್ದಾರೆ. ಅದೃಷ್ಟವಶಾತ್ ಬ್ಯಸಿನೆಸ್ ಕ್ಲಾಸ್‌ನಲ್ಲಿ ಯಾವುದೇ ಮಹಿಳಾ ಪ್ರಯಾಣಿಕರು ಇರಲಿಲ್ಲ. ಈ ಕುರಿತು ಏರ್‌ಇಂಡಿಯಾ ಇಲ್ಲಿಯವರೆಗೆ ಯಾವುದೇ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿಲ್ಲ.

## ಮಧ್ಯಾಹ್ನ 3.30ಕ್ಕೆ ಹೊಸವರ್ಷ ಸ್ವಾಗತಿಸುವ ದೇಶ

• ಹೊಸ ಕನ್ನಡ ನ್ಯೂಸ್

ಜಗತ್ತಿನೆಲ್ಲೆಡೆ ಹೊಸ ವರ್ಷದ ಸಂಭ್ರಮ ಕಳೆಗಟ್ಟಿದೆ. 2025ಕ್ಕೆ ವಿದಾಯ ಹೇಳಿ ಸಂಭ್ರಮ ಸಡಗರದಿಂದ ಜನರು 2026 ರನ್ನು ಅಪ್ಪಿಕೊಂಡಿದ್ದಾರೆ. ಹಿಂದೂ ಸಂಪ್ರದಾಯದ ಪ್ರಕಾರ ಯುಗಾದಿ ಹೊಸ ವರ್ಷವಾದರೂ, ಈ ಕ್ಯಾಲೆಂಡರ್ ವರ್ಷವನ್ನು ದೇಶದ ಜನ ಪಾರ್ಟಿ, ಮೋಜು, ಮ... ಮಾಡುವುದರ ಮುಖಾಂತರ ಸ್ವಾಗತಿಸುತ್ತಿದ್ದಾ... ಯಾಕೆಂದರೆ ಜಗತ್ತೇ ಹೊಸ ವರ್ಷವನ್ನು ಆಚರಿಸುತ್ತಿದೆ. ಅಂದ ಹಾಗೆ ಎಲ್ಲರೂ ಒಂದೇ ಸಮಯಕ್ಕೆ ಹೊಸ ವರ್ಷವನ್ನು ಆಚರಿಸಲು ಆಗುವುದಿಲ್ಲ. ಕಾರಣ ಭೂಮಿಯ ಚಲನೆ. ಇದೆಲ್ಲದರ ನಡುವೆ ಹೊಸ ವರ್ಷವನ್ನು ಸ್ವಾಗತಿಸು... ಮೊದಲ ದೇಶ ಯಾವುದು ಎಂಬ ಇಂಟರೆಸ್ಟಿಂಗ್ ವಿಚಾರ ಇವತ್ತು ಮುನ್ನಲೆಗೆ ಬಂದಿದೆ.

**ವಿಸ್ಮಯ ವಿಶ್ವ**

ಸಮಯದ ಆಧಾರದಲ್ಲಿ ಮೊದಲು ಜನವರಿ 1, 2026 ದಿನಾಂಕ ಅಂದರೆ ಹೊಸ ವರ್ಷವನ್ನು ಸ್ವಾಗತಿಸುವ ದೇಶ ... ಐಸ್‌ಲೆಂಡ್. ಪೆಸಿಫಿಕ್ ಒಶಿಯನ್ ...ುವ ಈ ಪುಟಾಣಿ ದೇಶ ಮೊದಲು ಹೊಸ ವರ್ಷವನ್ನು ಸ್ವಾಗತಿಸಿದೆ. ಈ ಐಸ್‌ಲೆಂಡ್ ಗಃಐಖ+14 ಟೈಮ್ ಜೋನ್‌ನಲ್ಲಿದೆ. ಈ ಐಸ್‌ಲೆಂಡ್ ನ್ನು ಕ್ರಿಸ್ಮಸ್ ಲ್ಯಾಂಡ್ ಎಂದೂ ...ರೆಯುತ್ತಾರೆ. ವಿಶೇಷ ಅಂದರೆ ಕಿರಿಬತಿ ಭಾರತದ ಸಮಯದ ಪ್ರಕಾರ, ನಿನ್ನೆ ಡಿಸೆಂಬರ್ 31 ಮಧ್ಯಾಹ್ನ 3:30ಕ್ಕೆ ಹೊಸ



ವರ್ಷವನ್ನು ಬರಮಾಡಿಕೊಂಡಿದೆ! ಕಾರಣ ಭಾರತೀಯರಿಗೆ ಡಿಸೆಂಬರ್ 31ರ ಮಧ್ಯಾಹ್ನ 3.30 ನಿಮಿಷಕ್ಕೆ ಕಿರಿಬತಿಯಲ್ಲಿ ಜನವರಿ 1 , 2026ರ ಮಧ್ಯರಾತ್ರಿ ಪಾರ್ಟಿಯ ಸಮಯ ಆಗಿತ್ತು!

ಇನ್ನು ಹೊಸ ವರ್ಷವನ್ನು ಬರಮಾಡಿಕೊಳ್ಳುವ ಆದೇಶಗಳ ಪೈಕಿ ಭಾರತಕ್ಕೆ 15ನೇ ಸ್ಥಾನವಿದೆ. ಆಸ್ಟ್ರೇಲಿಯಾ, ಚೀನಾ, ಸಿಂಗಾಪೂರ ಸೇರಿದಂತೆ ಹಲವು ರಾಷ್ಟ್ರಗಳು ಕೇಕ್ ಕತ್ತರಿಸಿ ಕುಡಿದು ಕುಪ್ಪಳಿಸಿ ಹೊಸವರ್ಷಕ್ಕೆ ಪಾಲಾರ್ಪಣೆ ಮಾಡಿದ ಬಳಿಕ ಬಳಿಕ ಭಾರತ ಹೊಸ ವರ್ಷವನ್ನು ಸ್ವಾಗತ ಮಾಡುತ್ತದೆ. ಸ್ವಲ್ಪ ತಡವಾಗಿ ಬಂದ್ರೆ ಏನಾಯ್ತು? ಹೊಸದಾಗಿ ಸಡಗರದಿಂದ ಸ್ವಾಗತಿಸೋದು ಮುಖ್ಯ ಅಲ್ಲವೇ?

## ಹೂಡಿಕೆ ಭೀಷ್ಮ ವಾರೆನ್ ಬಫೆಟ್ ಆಡಳಿತ ಯುಗಾಂತ್ಯ, 90 ಲಕ್ಷ ಕೋಟಿ ಸಾಮ್ರಾಜ್ಯ ಸಾರಥಿ ಯಾರು?

ನ್ಯೂಯಾರ್ಕ್: ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವುದು ಹೇಗೆ ಎನ್ನುವುದು ಮಾತ್ರವಲ್ಲ ಹೆಚ್ಚು ಕಷ್ಟವಿಲ್ಲದೆ, ಉದ್ವೇಗ ಮಾಡಿಕೊಳ್ಳದೆ ದುಡ್ಡು ಮಾಡುವುದು ಮತ್ತು ಅದನ್ನೇ ಬೃಹತ್ ಸಂಪತ್ತಾಗಿ ಪರಿವರ್ತಿಸುವುದು ಹೇಗೆ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಹೂಡಿಕೆ ಮಾಂತ್ರಿಕ, 'ಒರಾಕಲ್ ಆಫ್ ಒಮಹಾ' ಖ್ಯಾತಿಯ ವಾರೆನ್ ಬಫೆಟ್ ಇನ್ಮುಂದೆ ತಮ್ಮ ಸಾಮ್ರಾಜ್ಯ ನಡೆಸುವ ಕುರ್ಚಿಯಲ್ಲಿ ಕುಳಿತುಕೊಳ್ಳಲ್ಲ.

95ನೇ ವಯಸ್ಸಿನಲ್ಲಿ ಬರ್ಕ್‌ಶೈರ್ ಹ್ಯಾಥ್‌ವೇ ಎಂಬ ಕೊಬ್ಬಿದ ಆನೆಯಂತೆ ಬೆಳೆದ ಅಪಾರ ಸಂಪತ್ತಿನ ಮುಖ್ಯಸ್ಥ ಸ್ಥಾನದಿಂದ ಕೆಳಗಿಳಿದಿದ್ದಾರೆ. ಸುಮಾರು 1 ಟ್ರಿಲಿಯನ್ ಡಾಲರ್ (ಸುಮಾರು 90 ಲಕ್ಷ ಕೋಟಿ ರೂ.)ಗೂ ಅಧಿಕ ಮೌಲ್ಯವನ್ನು ಹೊಂದಿರುವ ಈ ಬೃಹತ್ ಕಂಪನಿಯ ಭಾರ ಈಗ ಬಫೆಟ್ ನಂಬಿಕಸ್ತ ಬಂಟ ಗ್ರೆಗ್ ಏಬಲ್ ಹೆಗಲಿಗೆ ಬಿದ್ದಿದೆ.

**ಸಂಕಷ್ಟದ ಜವಳಿ ಕಂಪನಿಯಿಂದ ಶುರುವಾದ ಜರ್ನಿ:** ಅದು 1960ರ ದಶಕ. ಅವತ್ತು ಸಂಕಷ್ಟದಲ್ಲಿದ್ದ ಜವಳಿ ಕಂಪನಿ ಬರ್ಕ್‌ಶೈರ್ ಹ್ಯಾಥ್‌ವೇಯ ಷೇರುಗಳನ್ನು ವಾರೆನ್ ಬಫೆಟ್ ಖರೀದಿಸಿದ್ದರು.



ಆಗ ನಷ್ಟದಲ್ಲಿದ್ದ ಈ ಕಂಪನಿಯನ್ನು ತಮ್ಮ ದೂರದೃಷ್ಟಿಯಿಂದ ವಿಶ್ವದ ಅತ್ಯಂತ ಯಶಸ್ವಿ ಹೂಡಿಕೆ ಸಂಸ್ಥೆಯಾಗಿ ರೂಪಾಂತರ ಆಗಬಹುದು ಅನ್ನು ಕಲ್ಪನೆ ಕೂಡಾ ಯಾರಿಗೂ ಇದ್ದಿರಲಾರದು. ಆದರೆ ಅದೇ ಹೆಸರಿನ ಕಂಪನಿ ಇವತ್ತು ಶತ ಕೋಟಿ ಡಾಲರ್ ಬಾಳುತ್ತಿದೆ. ಅದರಲ್ಲಿ ಕಾಣುವುದು ವಾರೆನ್ ಬಫೆಟ್ ರವರ ಹೂಡಿಕೆ ಜ್ಞಾನ, ಶ್ರಮ, ಅತ್ಯಂತ ಕನಿಷ್ಠ ಖರ್ಚುಮಾಡುವ ಗುಣ ಮತ್ತು ಅಪಾರ ತಾಳ್ಮೆ!

ಹಾಗೆ ಶುರುಮಾಡಿದ ಕಂಪನಿಯನ್ನು 1985ರಲ್ಲಿ ಜವಳಿ ಉದ್ಯಮವನ್ನು ಸಂಪೂರ್ಣ ಬಿಟ್ಟು, ಕೊನೆಯ ಗಿರಣಿಯನ್ನು ಬಂದ್ ಮಾಡಿ ಅವರು ಇನ್ಶ್ಯೂರೆನ್ಸ್, ರೈಲ್ವೆ ಮತ್ತು ತಂತ್ರಜ್ಞಾನದಂತಹ ವೈವಿಧ್ಯಮಯ ಕ್ಷೇತ್ರಗಳಿಗೆ ಹೊರಳಿಕೊಂಡರು. ಬರ್ಕ್ ಶೇರ್ ಹಾಥ್ವೇ ಅನ್ನು ಹೂಡಿಕೆ ಮಾಡುವ ಹೋಲ್ಡಿಂಗ್ ಕಂಪನಿಯಾಗಿ ಬದಲಾಯಿಸಿದರು. ಬಫೆಟ್ ಅವರ ಈ ನಿರ್ಧಾರ ಷೇರುದಾರರಿಗೆ ದೀರ್ಘಕಾಲದ ಲಾಭ ತಂದುಕೊಟ್ಟಿತು.

ಬಫೆಟ್ ಯಶಸ್ಸಿನ ಹಿಂದೆ ಅವರ ಸ್ನೇಹಿತ, ಪಾಲುದಾರ ಚಾರ್ಲಿ ಮಂಗರ್ ಅವರ ಪಾತ್ರ ಮಹತ್ವದ್ದಾಗಿತ್ತು. ಇವರಿಬ್ಬರ ಬಾಂಧವ್ಯ ಕೇವಲ ಹೂಡಿಕೆಗಷ್ಟೇ ಸೀಮಿತವಾಗಿರಲಿಲ್ಲ, ಬದಲಾಗಿ ಕಾಲದ ತಾಳ್ಮೆಯ ಪರೀಕ್ಷೆಯನ್ನು ಎದುರಿಸಿ ,ವ್ಯವಹಾರವನ್ನು ಕುದುರಿಸುವ, ಕಟ್ಟುವ ಗುರಿಯನ್ನು ಬೆನ್ನತ್ತುವ ಕೆಲಸಗಳಿದ್ದವು. ಈಗ ಕಾಲ ಮತ್ತಷ್ಟು ಮುಂದೆ ಸರಿದಿದೆ. ವಾರೆನ್ ಬಫೆಟ್ ರವರ ಬಿಲಿಯನ್ ಸಾಮ್ರಾಜ್ಯಕ್ಕೆ ಹೊಸ ಅಧಿಪತಿ ಬರೋದು ಅನಿವಾರ್ಯವಾಗಿದೆ.

**ಕೋಕಾ-ಕೋಲಾ**

**1980ರ ದಶಕದಲ್ಲಿ ಮಾಡಿದ ಈ ಹೂಡಿಕೆ ಬಫೆಟ್ ಪಾಲಿಗೆ 'ಫಾರ್ ಎವರ್ ಸ್ಟಾಕ್' (ಶಾಶ್ವತ ಷೇರು) ಆಯಿತು. ಬ್ರ್ಯಾಂಡ್ ಮೌಲ್ಯ ಮತ್ತು ವಿತರಣಾ ಜಾಲದ ಕಾರಣದಿಂದ ಇದು ಇಂದಿಗೂ ಲಾಭದಾಯಕವಾಗಿದೆ. ಅಲ್ಲದೆ, ಆಪಲ್‌ನಿಂದ ಹಿಡಿದು ಡ್ಯುರಾಸೆಲ್ ಬ್ಯಾಟರಿಗಳವರೆಗೆ, ಬಫೆಟ್ ಬ್ರಾಂಡ್ ಹೂಡಿಕೆದಾರರನ್ನು ಶ್ರೀಮಂತರನ್ನಾಗಿ ಮಾಡಿವೆ. ಈಗ ಬಫೆಟ್ ಪರಂಪರೆಯನ್ನು ಮುಂದುವರಿಸುವ ಹೊಣೆ ಗ್ರೆಗ್ ಏಬಲ್ ಮೇಲಿದೆ.**

**ನೂತನ ಸಾರಥಿ ಗ್ರೆಗ್ ಏಬಲ್ ಯಾರು?:** ಸುಮಾರು ಎರಡೂವರೆ ದಶಕಗಳಿಂದ ಬರ್ಕ್‌ಶೈರ್ ಹ್ಯಾಥ್‌ವೇಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರೆಗ್ ಏಬಲ್, 2000ನೇ ಇಸವಿಯಲ್ಲಿ ಕಂಪನಿ ಸೇರಿಕೊಂಡಿದ್ದರು. ಅದರ ಎನರ್ಜಿ ವಿಭಾಗವನ್ನು ಅಮೆರಿಕದ ಅತಿದೊಡ್ಡ ವಿದ್ಯುತ್ ಪೂರೈಕೆ ಸಂಸ್ಥೆಯಾಗಿ ಬೆಳೆಸುವಲ್ಲಿ ಇವರ ಪಾತ್ರ ಹಿರಿದು. ಕಳೆದ ವರ್ಷ ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಬಫೆಟ್, ಏಬಲ್ ಅವರನ್ನು ಸಿಇಒ ಆಗಿ ಘೋಷಿಸಿದ್ದರು. ಬರ್ಕ್‌ಶೈರ್‌ನ ಅಂಗಸಂಸ್ಥೆಗಳಾದ ರೈಲ್ವೆ, ರಿಟೇಲ್, ಮತ್ತು ಇಂಧನ ವಲಯದ ವ್ಯವಹಾರಗಳನ್ನು ಏಬಲ್ ಮುನ್ನಡೆಸಲಿದ್ದಾರೆ.

**ಭಾರತೀಯನ ಹೆಗಲಿಗೆ ವಿಮಾವಲಯ:** ಬರ್ಕ್‌ಶೈರ್ ಹ್ಯಾಥ್‌ವೇಯ ವಿಮಾ ವ್ಯವಹಾರಗಳ ಸಂಪೂರ್ಣ ಜವಾಬ್ದಾರಿಯನ್ನು ಭಾರತೀಯ ಮೂಲದ ಅಜಿತ್ ಜೈನ್ (74) ನಿರ್ವಹಿಸಲಿದ್ದಾರೆ. ಇವರು ಕಂಪನಿಯ ವೈಸ್ ಚೇರ್ಮನ್ ಆಗಿದ್ದು, ವಿಮಾ ಕ್ಷೇತ್ರದಲ್ಲಿ ಪರಿಣತಿ ಹೊಂದಿದ್ದಾರೆ.

## ನಿಟ್ಟೆ ಡೀಮ್ಡ್ ವಿಶ್ವವಿದ್ಯಾನಿಲಯ ಕುಲಪತಿ ಎನ್.ವಿನಯ ಹೆಗ್ಡೆ ನಿಧನ

ಖ್ಯಾತ ಶಿಕ್ಷಣ ತಜ್ಞ, ಉದ್ಯಮಿ ಹಾಗೂ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎನ್.ವಿನಯ ಹೆಗಡೆ (86) ಅವರು ಗುರುವಾರ ಬೆಳಗಿನ ಜಾವ ನಿಧನ ಹೊಂದಿದರು. ಇವರ ತಂದೆ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಹಾಗೂ ಲೋಕಸಭೆಯ ಮಾಜಿ ಸ್ಪೀಕರ್ ದಿ.ಜಸ್ಟಿಸ್ ಕೆ.ಎಸ್.ಹೆಗ್ಡೆ ಅವರ ದ್ವಿತೀಯ ಪುತ್ರ. ಅವರು ಕೆಲ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಹೃದಯಾಘಾತದಿಂದ ನಿಧನ ಹೊಂದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿದೆ. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ. ವಿನಯ ಹೆಗಡೆಯವರು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮಾಡಿ, 1979 ರಲ್ಲಿ ತಮ್ಮ ತಂದೆಯ ಆಸೆಯಂತೆ ನಿಟ್ಟೆ ಎಜುಕೇಶನ್ ಟ್ರಸ್ಟ್ ಸ್ಥಾಪನೆ ಮಾಡಿದರು. ಇಂದು ನಿಟ್ಟೆ ಶಿಕ್ಷಣ ಸಂಸ್ಥೆಯು ವೈದ್ಯಕೀಯ, ಎಂಜಿನಿಯರಿಂಗ್ ಸೇರಿ 40ಕ್ಕೂ ಹೆಚ್ಚು ಪ್ರತಿಷ್ಠಿತ ವಿದ್ಯಾಸಂಸ್ಥೆಗಳನ್ನು ಒಳಗೊಂಡಿದೆ. ಈ ವಿಶ್ವವಿದ್ಯಾಲಯಕ್ಕೆ ಪರಿಗಣಿತ ವಿವಿ ಮಾನ್ಯತೆಯೂ ಇತ್ತೀಚೆಗೆ ದೊರಕಿತ್ತು. ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲದೇ, ಆಟೋಮೊಬೈಲ್ ಬಿಡಿಭಾಗಗಳ ತಯಾರಿಕೆಯ ಕಂಪನಿ ಲೆಮಿನಾ ಸಸ್ಪೆನ್ಷನ್ ಪ್ರೈವೇಟ್ ಲಿಮಿಟೆಡ್ ಸೇರಿ ಲೆಮಿನಾ ಸಮೂಹ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷರಾಗಿ ಯಶಸ್ವಿ ಉದ್ಯಮಿ ಪಟ್ಟ ಪಡೆದುಕೊಂಡಿದ್ದರು. ಇವರ ಸಮಾಜ ಸೇವೆಯನ್ನು ಗುರುತಿಸಿ ಕರ್ನಾಟಕ ಸರಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಮಂಗಳೂರು ವಿಶ್ವವಿದ್ಯಾಲಯವು ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿತ್ತು.





▸ಸುದರ್ಶನ್ ಪ್ರವೀಣ್, ಬೆಳಾಲು
hosakannada@gmail.com

# ಮಹಾಭಾರತದಲ್ಲಿ ಒನ್ ನೈಟ್ ಸ್ಟ್ಯಾಂಡ್ ಪ್ರಸ್ತಾಪ
## ಒಂದು ರಾತ್ರಿಗಾದರೂ ಸರಿ, ನೀ ಬೇಕು.... ಅಂದ ವಿಧವೆ !

ಮಹಾಭಾರತ ಕಾಲದಲ್ಲಿ ವಿಧವಾ ವಿವಾಹ ಅಂತಹ ಒಂದು ದೊಡ್ಡ ಸಮಸ್ಯೆಯಾಗಿತ್ತು ಅಂತ ಅನ್ನಿಸುತ್ತಿಲ್ಲ. ಕಾರಣ ಮಹಾಭಾರತದ ಕಥಾನಾಯಕ ಅರ್ಜುನ ಕೂಡಾ ವಿಧವಾ ವಿವಾಹ ಆಗಿದ್ದ. ಈ ಓರ್ವ ಪಾಂಡವ ವೀರನನ್ನು ಹೊರತುಪಡಿಸಿ, ವಿಧವೆಯನ್ನು ಮದುವೆಯಾದ ಬೇರೆ ಉದಾಹರಣೆಗಳು ಸುಲಭಕ್ಕೆ ಸಿಗುವುದಿಲ್ಲ. ಅರ್ಜುನನಿಗಿಂತಲೂ ಮೊದಲು, ಉಗ್ರಾಯುಧ ಎಂಬ ರಾಜನು ಶಂತನುವಿನ ವಿಧವೆ ಪತ್ನಿ ಸತ್ಯವತಿಯನ್ನು ಮದುವೆಯಾಗಬಯಸಿದ್ದ. ಆದರೆ ಭೀಷ್ಮನಿಗೆ ಆ ಮೈತ್ರಿ ಇಷ್ಟವಾಗಲಿಲ್ಲ. ಹಾಗಾಗಿ ಈ ವಿವಾಹ ಸಂಧಾನವನ್ನು ಭೀಷ್ಮ ನಿರಾಕರಿಸಿದ. ಇದು ಇನ್ನೊಂದು ಕಥೆ. ಅದರ ಬಗ್ಗೆ ಇನ್ನೊಂದು ಬಾರಿ ಹೇಳುತ್ತೇನೆ.

ಅರ್ಜುನನೊಂದಿಗಿನ ಉಲೂಪಿ ಎಂಬ ರಾಜ ಪುತ್ರಿಯ ವಿವಾಹವು, ಆ ಕಾಲದಲ್ಲಿ ಕೂಡಾ ವಿಧವೆಯೊಬ್ಬಳು ಅವಳ ಇಚ್ಛೆಯಂತೆ ಮದುವೆ ಆಗಬಹುದಿತ್ತು ಎಂಬುದನ್ನು ತೋರಿಸುತ್ತದೆ. ಅಷ್ಟೇ ಅಲ್ಲ, ಹೆಣ್ಣೊಬ್ಬಳು ಹಠ ಹಿಡಿದು ಒನ್ ನೈಟ್ ಸ್ಟಾಂಡ್ ಆದರೂ ಸರಿ, ನೀನು ಬೇಕೆಂದು ಪುರುಷನೊಬ್ಬನ ಬಳಿ ತೀವ್ರ ಬಯಕೆ ಹೇಳಿಕೊಂಡ ಹೆಣ್ಣೊಬ್ಬಳ ಕಥೆಯಿದು.



ಉಲೂಪಿ ನಾಗ ಕನ್ನಿಕೆ. ಆಕೆ ನಾಗ ನಾಯಕ ಐರಾವತ ಕೌರವ್ಯನ ಮಗಳು. ಆಕೆ ವಿಧವೆಯಾಗಿದ್ದಳು ಮತ್ತು ಅವಳಿಗೆ ಮಕ್ಕಳಿರಲಿಲ್ಲ. ಬಹಳ ಹಿಂದೆಯೇ ಗರುಡನು ಉಲೂಪಿಯ ಗಂಡನನ್ನು ಕೊಂದಿದ್ದ. ಆದ್ದರಿಂದ, ವೈಧವ್ಯದ ನಂತರ ಆಕೆ ತನ್ನ ತಂದೆಯೊಂದಿಗೆ ವಾಸಿಸುತ್ತಿದ್ದಳು. ಸಣ್ಣ ಪ್ರಾಯದ ಆಕೆ ಸುಂದರಿಯಾಗಿದ್ದಳು ಕೂಡಾ. ಗಂಡನ ಸಾವಿನಿಂದ ತನ್ನ ಜೀವನವು ನಿಂತಲ್ಲಿ ನಿಂತೇ ಹೋಯಿತು ಎಂದು ಆಕೆ ಯಾವುದೇ ಭರವಸೆಯಿಲ್ಲದೆ ನಿರಾಶೆಯಿಂದ ಬದುಕುತ್ತಿದ್ದಳು. ಅಂದಹಾಗೆ ನಾಗಗಳು ಕಾಡಿನಲ್ಲಿ ವಾಸಿಸುತ್ತಾ ಬಹಳ ಸ್ವತಂತ್ರ ಜೀವನ ನಡೆಸುತ್ತಿದ್ದರು. ನಾಗಗಳು ವಾಸುಕಿ, ತಕ್ಷಕ, ಕೌರವ್ಯ ಮತ್ತು ಇತರರ ನೇತೃತ್ವದ ಗುಂಪುಗಳಾಗಿ ವಿಂಗಡಿಸಲ್ಪಟ್ಟು ಪಂಗಡಗಳಲ್ಲಿ ಬದುಕುತ್ತಿದ್ದರು.

ಈ ಪೈಕಿ ಕೌರವ್ಯನ ನಾಗಲೋಕವು ಭಾಗೀರಥಿ ನದಿಯ ನೀರಿನ ಅಡಿಯಲ್ಲಿ ಅಸ್ತಿತ್ವದಲ್ಲಿತ್ತು. ಉಲೂಪಿ ಆಗಾಗ ನೀರಿಂದ ಹೊರಬಂದು, ನದಿಯ ದಡದಲ್ಲಿರುವ ಮಹಾದೇವನ ದೇವಾಲಯಕ್ಕೆ ಭೇಟಿ ನೀಡುತ್ತಿದ್ದಳು. ಅವಳು ಮತ್ತು ಅವಳ ಸ್ನೇಹಿತರು ಸ್ವಲ್ಪ ಸಮಯದವರೆಗೆ ಅಲ್ಲಿ ಸುತ್ತಾಡುತ್ತಾ, ಮಣ್ಣಿನ ಸುವಾಸನೆಯಿಂದ ತಮ್ಮನ್ನು ತಾವು ಖುಷಿಪಡಿಸಿಕೊಂಡು, ತಮ್ಮ ಲೋಕಕ್ಕೆ ಹಿಂತಿರುಗುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ, ಅವಳ ಸ್ನೇಹಿತರು ಮೂರನೇ ಪಾಂಡವ ಅರ್ಜುನನನ್ನು ನೋಡುವ ಅವಕಾಶವನ್ನು ಪಡೆದರು. ಆಗ ಪಾಂಡವರು ಗಂಗಾನದಿಯ ದಡದಲ್ಲಿ ಒಂದು ಆಶ್ರಮದಲ್ಲಿ ನೆಲೆಸಿದ್ದರು.

ಆಗ ಅರ್ಜುನನು ಬ್ರಹ್ಮಚಾರಿಯ ವೇಷದಲ್ಲಿ ಅಲ್ಲಿದ್ದು, ಆತನನ್ನು ನೋಡಿ ಆಕೆಯ ಸ್ನೇಹಿತೆಯರು ತುಂಬಾ ಸಂತೋಷಪಟ್ಟರು. ಅಲ್ಲದೆ, ಆಕೆ ತಪಸ್ವಿಯಾಗಿ ಇಲ್ಲಿರಲು ಕಾರಣವೇನಿರಬಹುದು ಎಂದು ಆಶ್ಚರ್ಯಪಟ್ಟಳು. ಅಲ್ಲಿ ಬ್ರಹ್ಮಚಾರಿ ವೇಷ ಧರಿಸಿರುವ ಅರ್ಜುನನ ಹಿಂದೆ ಇಂದ್ರಪ್ರಸ್ಥದಿಂದ ಬಂದ ದೊಡ್ಡ ಅನುಯಾಯಿಗಳ ಗುಂಪೇ ಇತ್ತು, ಹೆಚ್ಚಾಗಿ ಬ್ರಾಹ್ಮಣರು ಅವನೊಂದಿಗೆ ಇದ್ದರು. ಅವರು ಆತನ ತೀರ್ಥಯಾತ್ರೆಯ ಹಿಂದಿನ ಕಾರಣದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು.

ಆದರೆ ಉಲೂಪಿ ತನ್ನ ಸ್ನೇಹಿತರನ್ನು ನಂಬಲಿಲ್ಲ. ರಾಜಕುಮಾರ ಅರ್ಜುನನು ಇಷ್ಟು ಚಿಕ್ಕ ವಯಸ್ಸಿನಲ್ಲಿ ತಪಸ್ವಿಯಾಗಲು ಹೇಗೆ ಸಾಧ್ಯ? ಅದು ಕೂಡ, ಹನ್ನೆರಡು ವರ್ಷಗಳ ಕಾಲ? ಕೇವಲ ಪ್ರತಿಜ್ಞೆ ಒಂದನ್ನು ಉಲ್ಲಂಘಿಸಿದ ಸರಳ ಕಾರಣಕ್ಕಾಗಿ ಆತನ ಸಹೋದರರು ಅವನನ್ನು ಇಂದ್ರಪ್ರಸ್ಥದಿಂದ ಹೊರಬರಲು ಏಕೆ ಬಿಟ್ಟರು? ಅಷ್ಟಕ್ಕೂ ಅರ್ಜುನ ಹೀಗೆ ಅರಮನೆ ಬಿಟ್ಟು ಹೊರಕ್ಕೆ ಹೊರಟು ಬರಲು ಕಾರಣವಾದ ವಿಷಯ ಆಕೆಗೆ ನಗು ತರಿಸಿತ್ತು.

(ಅಂದು ಅರ್ಜುನನು ತನ್ನ ಹಿರಿ ಸಹೋದರ ಧರ್ಮರಾಯನು ದ್ರೌಪದಿಯೊಂದಿಗೆ ಇದ್ದ ಖಾಸಗಿಯಾಗಿ ಇದ್ದ. ಆಗ ಅರ್ಜುನನು ಆ ಜಾಗವನ್ನು ಪ್ರವೇಶಿಸಿದ. ಧರ್ಮಜನ ಕೋಣೆಯಲ್ಲಿಟ್ಟಿದ್ದ ಆಯುಧಗಳನ್ನು ತೆಗೆದುಕೊಳ್ಳಲು ಆಟ ಒಳ ನುಗ್ಗಿದ್ದ; ಅದು ಕೂಡ ಹಸುಗಳನ್ನು ಕದ್ದ ಕಳ್ಳರಿಂದ ಆಗುವ ಉಪಟಳವನ್ನು ತಡೆಯಲು ಓರ್ವ ಬ್ರಾಹ್ಮಣನಿಗೆ ಸಹಾಯ ಮಾಡಲು!)

ಉಲೂಪಿಯ ಗೆಳತಿಯರು ಹೋಗಿ ಅರ್ಜುನನ ಸೌಂದರ್ಯವನ್ನು ಸವಿಯುವ ಭಾಗ್ಯವನ್ನು ಪಡೆಯಲು ಮನವೊಲಿಸಿದರು. ಆತ ಬಲಿಷ್ಠ ಮತ್ತು ಅತ್ಯಂತ ಸುಂದರನಾಗಿದ್ದ. 'ಆತ ನದಿಯಲ್ಲಿ ಸ್ನಾನ ಮಾಡಿದಾಗ ಅವನನ್ನು ನೋಡಿದರೆ ಜೀವನ ಸಾರ್ಥಕ' ಎಂದು ಆಕೆಯ ಸ್ನೇಹಿತರು ಪುಸಲಾಯಿಸಿದರು. ಉಲೂಪಿಗೆ ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕುತೂಹಲದಿಂದ, ಅವರು ಹೇಳಿದ್ದು ನಿಜವೇ ಎಂದು ಸ್ವತಃ ತಿಳಿದುಕೊಳ್ಳಲು ಆಕೆ ನದಿ ತೀರಕ್ಕೆ ಹೊರಟು ಇಣುಕಿದಳು. ಅಷ್ಟೇ, ಆಕೆಯ ಬಳುಕುವ ಸೊಂಟ ಒಮ್ಮೆಗೆ ಕಂಪಿಸಿತು.

**(ಆಸಕ್ತಿಕರ ಕಥೆ ಮುಂದಿನ ವಾರ ಮುಂದುವರೆಯುವುದು)**

## ಕಿರಿಕ್ ಪ್ರಶ್ನೆ ಕಿಕ್ ಉತ್ತರ

**ಮೇಷ್ಟ್ರೇ, ಹೊಸ ವರ್ಷದಲ್ಲಿ ನಿಮ್ಮ ರೆಸಲ್ಯೂಷನ್ ಏನು?**
**ವಿಂದ್ಯಾ, ಪುತ್ತೂರು**

ಜಾಸ್ತಿ A ಗ್ರೇಡ್ ಕೊಡೋದು!

**ಹೊಸವರ್ಷದಲ್ಲಿ ಎದ್ದ ತಕ್ಷಣ ಹೆಚ್ಚಿನವರು ಮಾಡುವ ಕೆಲಸವೇನು?**
**ಗಿರೀಶ್, ಕೊಕ್ಕಡ**

ಅಂದುಕೊಂಡಂತೆ ಜಾಗಿಂಗ್ ಗೆ ಶೂ ಹಾಕ್ಕೊಂಡು, ನಂತ್ರ ನಾಳೆ ಹೋಗೋಣ ಅಂದ್ಕೊಂಡು ಬಿಚ್ಚಿಟ್ಟು ಶೂಗೆ ಪ್ರಾಂಕ್ ಮಾಡೋದು!

**ಹೊಸ ವರ್ಷ ಇನ್ನೇನು ಬರಲಿರುವಾಗ ಎಡಗಾಲಲ್ಲಿ ನಿಲ್ಲಬೇಕಂತೆ ನಿಜವೇ?**
**ಸುನೀತ್, ಬೆಳ್ತಂಗಡಿ**

ಮತ್ತೆ ಬಲಗಾಲಿಟ್ಟು ಸ್ವಾಗತಿಸಬೇಕಲ್ಲ!

**ನ್ಯೂ ಇಯರ್ ಸೆಲೆಬ್ರೇಷನ್ ಇಷ್ಟ ಪಡದವರು ಇರ್ತಾರಾ?**
**ಶಿವಾನಿ, ಮಂಗಳೂರು**

ನ್ಯೂ ಇಯರ್ ಪಾರ್ಟಿ ಹಾಲ್ ಕ್ಲೀನ್ ಮಾಡೋ ಜನ ಮತ್ತು ಕಾಯೋ ಪೊಲೀಸ್!

### ಜೋಕ್ ಜೋಕಾಲಿ

**ಸಂದರ್ಶಕ: ನೀನು ಮುಂದೆ ಏನಾಗಬೇಕೆಂದು ಕನಸು ಹೊಂದಿದ್ದೀಯ?**

ಬಾಲಕ: ನಾನು ಮುಂದಕ್ಕೆ ಅಪ್ಪನ ಥರ ಕೋಟ್ಯಧಿಪತಿ ಆಗಬೇಕೆಂದು ಕನಸು ಕಂಡಿದ್ದೇನೆ.

**ಸಂದರ್ಶಕ: ಹಾಗಾದ್ರೆ, ನಿಮ್ಮ ಅಪ್ಪ ಕೋಟ್ಯಾಧಿಪತಿಯ?**

ಬಾಲಕ: ಇಲ್ಲ, ಅಪ್ಪ ಕೂಡಾ ಕೋಟ್ಯಾಧಿಪತಿಯಾಗಬೇಕೆಂದು ಕನಸು ಕಂಡಿದ್ದರು!

**ನೀನು ನಿನ್ನ ಹುಬ್ಬನ್ನು ತುಂಬಾ ಮೇಲಕ್ಕೆ ಎಳೆದಿದ್ದೀಯ ಅಂದೆ; ನನ್ನ ಹೆಂಡತಿ ಆಶ್ಚರ್ಯದಿಂದ ನೋಡಿದಳು!**

ಅಮೇರಿಕಾದ ಹಿಂದಿನ ಅಧ್ಯಕ್ಷ ಅಬ್ರಹಾಂ ಲಿಂಕನ್ ರನ್ನು ಭೇಟಿಯಾದ ಮಹಿಳೆಯೊಬ್ಬಳು, 'ನೀವು ನನ್ನ ಗಂಡನಾಗಿದ್ದರೆ ನಿಮಗೆ ಟೀನಲ್ಲಿ ವಿಷ ಹಾಕಿ ಕೊಡುತ್ತಿದ್ದೆ' ಎಂದಳು.

ಅದಕ್ಕೆ ಲಿಂಕನ್, 'ನೀವು ಹೆಂಡತಿಯಾಗಿದ್ದರೆ, ನಾನು ಅದನ್ನು ಸಂತೋಷದಿಂದ ಕುಡಿಯುತ್ತಿದ್ದೆ' ಎಂದು ಉತ್ತರಿಸಿದ್ದರು.

# ಶ್ರೀಮಂತಿಕೆಯತ್ತ ಹೊರಟಿದೆ ಜಟಕಾ ಬಂಡಿ!

**ದುಡ್ಡು ಗಳಿಸುವಾತನ 108 ಅಭ್ಯಾಸ!**

ಗೆಳೆಯರೇ, ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು

ಇದು ಹಣಕಾಸಿನ ಬಗ್ಗೆ ನಾವು ಓದುತ್ತಿರುವ ಮೂರನೇ ಸಂಚಿಕೆ. ಮೊದಲ ಸಂಚಿಕೆಯಲ್ಲಿ ಪನಿಶ್ಮೆಂಟ್ ಸೇವಿಂಗ್ ಬಗ್ಗೆ, ಎರಡನೆಯ ಸಂಚಿಕೆಯಲ್ಲಿ ಯುಪಿಐ ಅಂದರೆ ಗೂಗಲ್ ಪೇ, ಫೋನ್ ಪೇ ಇತ್ಯಾದಿ 'ಶ್ರೀಮಂತ ಶತ್ರುಗಳ' ಬಗ್ಗೆ ಓದಿದ್ದೀರಿ. ಲೇಖನ ತುಂಬಾ ಇಷ್ಟಪಟ್ಟು ನೀವು ಮೆಸೇಜ್ ಮತ್ತು ಪತ್ರ ಬರೆದಿದ್ದೀರಿ. ಈ ವಾರ, ಹೊಸವರ್ಷಕ್ಕೆ ಬಲಗಾಲಿಟ್ಟು ಎಂಟ್ರಿ ಕೊಟ್ಟಿದ್ದೇವೆ. ತಿರುಗುವ ಕ್ಯಾಲೆಂಡರ್ ವರ್ಷಗಳು ಮತ್ತು ಹುಟ್ಟು ಹಬ್ಬಗಳು ನಮ್ಮಲ್ಲಿ ಉತ್ಸಾಹವನ್ನು ಮತ್ತು ಸದಾ ಆಸಕ್ತಿಯನ್ನು ಬೆಳೆಸುತ್ತವೆ. ಅವುಗಳ ಆಚರಣೆ ಅಗತ್ಯ ಮತ್ತು ಸ್ಪೂರ್ತಿದಾಯಕ.



ಹೆಚ್ಚಿನ ಸಂದರ್ಭಗಳಲ್ಲಿ, ಹೊಸ ವರ್ಷ ಲೆಕ್ಕದ ಪುಸ್ತಕ ಬದಲಿಸುವ ವರ್ಷ. ಜನವರಿ 1ರಿಂದ ಡೈರಿ ಹೊಸದಾಗಿ ಬರುತ್ತದೆ. ಇವತ್ತು ಲೆಕ್ಕದ ಪುಸ್ತಕದ ಪುಟಗಳು ತಿರುವಿ ಹಾಕಿ, ಹೊಸದನ್ನು ಬರೆಯುವ ಕಾಲ. ಈವರೆಗೆ ನೀವು ಡೈರಿ ಬರೆಯುವ ಅಭ್ಯಾಸ ಇಲ್ಲದೆ ಇರುವವರಾದರೆ, ನಿಮ್ಮ ಆಯ-ವ್ಯಯ, ಇನ್ಕಮ್ - ಖರ್ಚಿನ ಲೆಕ್ಕ ಬರೆಯುತ್ತಿಲ್ಲವಾದರೆ, ಇವತ್ತು ಒಳ್ಳೆಯ ಕ್ಷಣ. ನೀವು ಶ್ರೀಮಂತರಾಗಬೇಕು ಅನ್ನುವ ಮನಸ್ಸು, ಆಸೆ ಅಭಿಲಾಷೆ ಇತ್ಯಾದಿ ಇದ್ದರೆ ಇವತ್ತು ನೀವೊಂದು ಕೆಲಸ ಹೊಸದಾಗಿ ಶುರುಮಾಡಲೇ ಬೇಕು. ಇದರಲ್ಲಿ ಯಾವುದೇ ಮುಲಾಜು ಇಲ್ಲ.

**ಲೆಕ್ಕವಿಡುವುದು ಅಂದರೆ ಲೆಕ್ಕ ತಪ್ಪದೆ ಇರೋದು** :ಏನನ್ನಾದರೂ ಸರಿ, ಲೆಕ್ಕವಿಡದಿದ್ದರೆ ಲೆಕ್ಕ ತಪ್ಪುವುದು ಸಾಮಾನ್ಯ. ಎಷ್ಟೇ ಸಂಬಳ, ಏನೇ ಗಳಿಕೆ, ಅದೆಷ್ಟೇ ಉತ್ಪತ್ತಿ ಇದ್ದರೂ ಸರಿ: ಅದರಲ್ಲಿ ಎಷ್ಟು ಖರ್ಚಾಗುತ್ತದೆ ಅನ್ನೋದು ಮುಖ್ಯ. ಅದರಲ್ಲೂ, ಎಷ್ಟು ಖರ್ಚು ಮಾಡುತ್ತೇವೆ ಅನ್ನೋದು ಕೂಡಾ ಮುಖ್ಯವಲ್ಲ, ಗಳಿಸಿದುದರಲ್ಲಿ ಎಲ್ಲಾ ಕಳೆದು ಎಷ್ಟು ಉಳಿಯುತ್ತೆ ಅನ್ನೋದರ ಮೇಲೆ ಪರ್ಸನಲ್ ಫೈನಾನ್ಸ್ ನಿಂತಿರೋದು. ಮೊದಲಿಗೆ, ನಮ್ಮ ಗಳಿಕೆಯಲ್ಲಿ ಎಷ್ಟು ದುಡ್ಡು ಉಳಿದರೆ ಓಕೆ ಅಂತ ನಾವು ನಿರ್ಧರಿಸಿಕೊಳ್ಳಬೇಕು.

ಉದಾಹರಣೆಗೆ, ಒಬ್ಬರಿಗೆ 30,000 ಸಂಬಳ ಬರುತ್ತಿದೆ ಅಂದುಕೊಳ್ಳಿ. ಏನೇ, ಎಷ್ಟೇ ಖರ್ಚು ಮಾಡಲಿ, ಎಷ್ಟು ಉಳಿದರೆ ಸಾಕು ಅಂತ ಮೊದಲು ನಿರ್ಧಾರ ಮಾಡಿಬಿಡಬೇಕು. ತಿಂಗಳಿಗೆ 7 ಸಾವಿರ ಉಳಿಯಬೇಕು ಅಂದುಕೊಂಡರೆ, ಉಳಿದ 23 ಸಾವಿರ ಮಾತ್ರ ನಾವು ಬಳಸಬಹುದಾದ ಹಣ. 23 ಸಾವಿರದಲ್ಲಿ ಮನೆಬಾಡಿಗೆ ಕರೆಂಟ್ ಬಿಲ್, ರೇಷನ್ , ಗ್ಯಾಸು, ಮಕ್ಕಳ ಫೀಸು ಹೀಗೆ ಎಷ್ಟೇ ಸ್ಪೆಂಡ್ ಮಾಡಿ. ಅದು ನಿಮ್ಮ ಕಲೆಗಾರಿಕೆ. ಕಲೆಗಾರಿಕೆ ಮಾತ್ರವಲ್ಲ, ಅದು ನಮ್ಮ ಸೂಕ್ಷ್ಮತೆ ಕೂಡಾ.

ಏನೇ ಆದರೂ ಆ 7,000 ರೂಪಾಯಿಯನ್ನು ನಾವು ಮುಟ್ಟುವಂತೆಯೇ ಇಲ್ಲ. ಅದು ನಮ್ಮ ಹಣ ಅಲ್ಲವೇನೋ ಅನ್ನುವಂತೆ ಸೇವ್ ಮಾಡಿಟ್ಟರೆ ಮಾತ್ರ ಶ್ರೀಮಂತಿಕೆಯತ್ತ ಹೊರಟ ಜಟಕಾ ಬಂಡಿ ನಿಧಾನಕ್ಕಾದರೂ ಸರಿ, ಗುರಿ ತಲುಪಬಲ್ಲದು. ಹಾಗಾಗಿ, ಮೊದಲೇ ನಿರ್ಧರಿಸಿ, ನಿಮ್ಮ ಒಟ್ಟು ಉತ್ಪತ್ತಿಯಲ್ಲಿ ಎಷ್ಟು ಮೊತ್ತವನ್ನು ಬದಿಗೆ ಇರಿಸಿ ಸೇವಿಂಗ್ ಮಾಡಬೇಕೆಂದು?

ಎಷ್ಟು ಪರ್ಸೆಂಟ್ ಉಳಿತಾಯ ಮಾಡಬೇಕು?

ನಮ್ಮ ಗಳಿಕೆಯಲ್ಲಿ ಎಷ್ಟು ಪರ್ಸೆಂಟ್ ಮೊತ್ತವನ್ನು ಉಳಿಸಬೇಕು ಅನ್ನುವುದು ಇನ್ನೊಂದು ಉತ್ತರ ಬೇಕಾದ ದೊಡ್ಡ ಪ್ರಶ್ನೆ. ಸಾಮಾನ್ಯರ, ಸಣ್ಣ ಸಂಬಳದ ಉದ್ಯೋಗಿಗಳ ಮತ್ತು ಸಣ್ಣ ಪುಟ್ಟ ಸೋದ್ಯೋಗ ಮತ್ತು ಬ್ಯುಸಿನೆಸ್ ಇಟ್ಟುಕೊಂಡವರ ಉತ್ಪತ್ತಿಯಲ್ಲಿ ಕನಿಷ್ಠ 20% ಆದರೂ ಉಳಿತಾಯ ಮಾಡಬೇಕು. ಸಂಬಳ ಹೆಚ್ಚು ಇದ್ದವರು/ಹೆಚ್ಚಾದಂತೆ, ಈ ಪರ್ಸೆಂಟೇಜ್ ಕೂಡಾ ಜಾಸ್ತಿ ಆಗುತ್ತಾ ಹೋಗಬೇಕು.

(ಈ ಕನಿಷ್ಠ 20% ಲೆಕ್ಕಾಚಾರ, ಈ ಮೊದಲೇ ಹೇಳಿದಂತೆ ಸ್ಯಾಲರಿ ಪಡೆಯುವ ವರ್ಗಕ್ಕೆ ಮತ್ತು ಸಣ್ಣ ಮಧ್ಯಮ ಉತ್ಪತ್ತಿಯ ವ್ಯಾಪಾರಿಗಳಿಗೆ ಮಾತ್ರ ಸೀಮಿತ. ದೊಡ್ಡ ಆದಾಯದ ಬಿಸಿನೆಸ್ ಕ್ಲಾಸ್ ಜನರ ವಿಷಯದಲ್ಲಿ ಆದಾಯ ಮತ್ತು ಖರ್ಚಿನ ನಡುವೆ ಇನ್ನೊಂದು ಎಂಟ್ರಿ ಕೊಡುತ್ತದೆ. ಅದುವೇ ಹೂಡಿಕೆ. ಅದರ ಬಗ್ಗೆ ಇನ್ನೊಮ್ಮೆ ಮಾತಾಡೋಣ) ಅಂದ ಹಾಗೆ, ಇವತ್ತು ಹೊಸ ವರ್ಷ ಆದ ಕಾರಣ, ಹೊಸ ನೋಟ್ ಬುಕ್ ಕೊಳ್ಳಿ. ದಿನದ, ವಾರದ ಖರ್ಚು ಲೆಕ್ಕ ಬರೆದಿಡಿ. ತಿಂಗಳ ಕೊನೆಗೆ ಒಂದು ಸಮ್ಮರಿ ತೆಗೆಯಿರಿ. ಕನಿಷ್ಠ 20% ಹಣವನ್ನು ಉಳಿಸಲು ಮರೆಯದಿರಿ. 20% ಹಣವನ್ನು ಉಳಿಸಬೇಕು ಅಂದುಕೊಂಡರೆ, ಉಳಿದ 80% ಭಾಗವನ್ನು ಯಾವುದಕ್ಕೆ ಎಷ್ಟು ಖರ್ಚು ಮಾಡಬೇಕು? ಅಂತ ಕೂಡಾ ನಿರ್ಧರಿಸಬೇಕಾಗುತ್ತದೆ. ಅದನ್ನು 50/30/20 ಎಂಬ ಸುಂದರ ಬಜೆಟಿಂಗ್ ರೂಲ್ ವಿವರಿಸುತ್ತದೆ. ಅದರ ಬಗ್ಗೆ ಸವಿಸ್ತಾರವಾಗಿ ಮುಂದಿನ ವಾರ ನೋಡೋಣ. ಅಲ್ಲಿಯ ತನಕ, ಮುಷ್ಟಿ ಬಿಗಿದಿಡಿ. ಆಸೆ ಹಿಡಿದಿಡಿ. ಉಳಿತಾಯ ಎತ್ತಿಡಿ. ಶುಭವಾಗಲಿ.

★ಸುದರ್ಶನ್ ಪ್ರವೀಣ್, ಬೆಳಾಲು. hosakannada@gmail.com

## ✍ ಬರಹ ಫ್ಯಾಕ್ಟರಿ

### ಕ|ನ|ಸು|ಗ|ಳಿ|ಗೆ



ಕನಸುಗಳಿಗೆ ರೆಕ್ಕಗಳಿದ್ದಿದ್ದರೆ
ಹಾರಾಡಬಹುದಿತ್ತು
ಆದರೆ ರೆಕ್ಕೆಗಳಿಲ್ಲ....

ಕನಸುಗಳಿಗೆ ಭಾವನೆಗಳಿದ್ದಿದ್ದರೆ
ಭಾವುಕರಾಗಬಹುದಿತ್ತು
ಆದರೆ ಭಾವನೆಗಳಿಲ್ಲ....
ಕನಸುಗಳಿಗೆ?!

ಕನಸುಗಳಿಗೆ ಕಣ್ಣುಗಳಿದ್ದಿದ್ದರೆ
ತೆರೆದು ನೋಡಬಹುದಿತ್ತು
ಆದರೆ ಕಣ್ಣುಗಳಿಲ್ಲ....

ಕನಸುಗಳಿಗೆ ಹೃದಯವಿದ್ದಿದ್ದರೆ
ಹೃದಯದ ಆಚೆಯೂ ಇಣುಕಿ ನೋಡಬಹುದಿತ್ತು
ಆದರೆ ಹೃದಯವಿಲ್ಲ.....

ಕನಸುಗಳಿಗೆ ಕರುಣೆ ಇದ್ದಿದ್ದರೆ
ಕ್ಷಮಿಸಬಹುದಿತ್ತು
ಆದರೆ ಕರುಣೆ ಇಲ್ಲ.....

ಕನಸುಗಳಿಗೆ ಮಾನವೀಯತೆ ಇದ್ದಿದ್ದರೆ
ಮನುಷ್ಯರಾಗಬಹುದಿತ್ತು
ಆದರೆ ಮಾನವೀಯತೆ ಇಲ್ಲ....

ಕನಸುಗಳಿಗೆ ಜೀವ ಇದ್ದಿದ್ದರೆ
ನಡೆಯಬಹುದಿತ್ತು
ಆದರೆ ಜೀವ ಇಲ್ಲ....

ಕನಸುಗಳಿಗೆ ವಾಸ್ತವದ ಅರಿವಿದ್ದಿದ್ದರೆ
ಕಲ್ಪನದಾಚೆಯಿಂದ ಹೊರಗೆ ಬರಬಹುದಿತ್ತು
ಆದರೆ ವಾಸ್ತವದ ಅರಿವಿಲ್ಲ.....

ಕನಸುಗಳಿಗೆ ಅಂತ್ಯವಿದ್ದಿದ್ದರೆ
ಕೊನೆ ಮುಟ್ಟಬಹುದಿತ್ತು
ಆದರೆ ಅಂತ್ಯವಿಲ್ಲ....

ಕನಸುಗಳು ಕನಸಾಗಿಯೇ
ಉಳಿದರೆ
ಕನಸಿಗೆಲ್ಲಿ ಬೆಲೆ?
ಒಂದು ವೇಳೆ
ಕನಸುಗಳು ನನಸಾಗದೆ ಹೋದರೆ
ಅದು ಬರಿ ಕಲ್ಪನೆಯಾಗಬಹುದು
ಕನಸುಗಳು ಕನಸಾಗಿಯೇ
ಉಳಿದುಬಿಡಬಹುದು
ಯಾರಿಗೆ ಗೊತ್ತು?

ಹೌದು ಕನಸುಗಳಿಗೆ ಕೊನೆಯಿಲ್ಲ
ವಾಸ್ತವದಾಚೆಗಿನ ಅರಿವಿಲ್ಲ
ಗಡಿ,ಗೆರೆಗಳ ಮಿತಿಯಿಲ್ಲ
ಕನಸುಗಳಿಗೆ ಅಂತ್ಯವಿಲ್ಲ
ಕನಸುಗಳು ಎಂದಿಗೂ ಸಾಯುವುದಿಲ್ಲ
ನಿತ್ಯ ನಿರಂತರ
ಸುಂದರ
ಕಾಲ್ಪನಿಕ ಲೋಕ ಅಷ್ಟೇ....



▸ ಕಾರ್ತಿಕ್ ಭಟ್ ಬಳಗುಳಿ
ಸಿದ್ದಾಪುರ, ಉತ್ತರ ಕನ್ನಡ 'ಪೋಸ್ಟ್ - ಅವರಗುಪ್ಪ 581355

# ಆ ಕರಾಳ ಕತ್ತಲ ಮಧ್ಯರಾತ್ರಿ
## ಸುಕ್ಕು ನೇಯ್ಗೆಯ ಮುಖದ ಮುದುಕಿ ಕೈಯಲ್ಲಿ 26ರ ಮಗು !

ಕತ್ತಲು ದಟ್ಟವಾಯಿತು. ತಂಪುಗಾಳಿ ಅರೆ ಮುಚ್ಚಿದ್ದ ಕಿಟಕಿಯನ್ನೂ ದಾಟಿಕೊಂಡು ಹಾವಿನಂತೆ ಬುಸುಗುಡುತ್ತ ಬಂತು. ನಾನು ಊರಂಚಿನ ತೋಟದ ಮನೆಯಲ್ಲಿ ಒಬ್ಬನೇ ಮಲಗಿದ್ದೆ. ಒಂದೇ ಸವನೆ ಅರಚುವ ಜೀರುಂಡೆಯ ಶಬ್ದ ಬಿಟ್ಟರೆ ಬೇರೆಲ್ಲ ನೀರವ.

ದೂರದಲ್ಲಿ ಜನರು ಎಂದಿಗಿಂತ ಲವಲವಿಕೆಯಲ್ಲಿ ಇದ್ದಾರೆ. ಸುಯ್ಯುವ ಕುಳಿರ್ಗಾಳಿಯನ್ನು ಕೂಡ ಲೆಕ್ಕಿಸದೆ ಅವಳ ಬರುವಿಕೆಗಾಗಿ ಕಾಯುತ್ತಿದ್ದಾರೆ. ನಾನೂ ವರ್ಷಗಳಿಂದ ಅವಳಿಗಾಗಿ ಕಾಯುತ್ತಿದ್ದೇನೆ. ಜಗತ್ತಿಗೆ ಜಗತ್ತೆ ಉದ್ವೇಗಗೊಂಡಂತಿತ್ತು. ನಿದ್ದೆಯಿನ್ನೂ ಬಿದ್ದಿರಲಿಲ್ಲ. ಸಾವಿರ ಯೋಚನೆಗಳು, ನೂರು ಯೋಜನೆಗಳು ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸಿದ್ದವು. ಅದ್ಯಾವ ಮಾಯೆಯಲ್ಲಿ ನಿದ್ರಾದೇವಿ **ಬಂದು ತಬ್ಬಿಕೊಂಡಳು ಗೊತ್ತಿಲ್ಲ. ಕುಳಿತುಕೊಂಡಲ್ಲೇ ಒಂದು ಜೊಂಪು. ಚಿಕ್ಕ ತೂಕಡಿಗೆ.**

**ಅಷ್ಟರಲ್ಲಿ ಯಾರೋ ದಬಾ ದಬಾ ಬಾಗಿಲು ಬಡಿದ ಸದ್ದು. ನೋಡಿದರೆ ಆಗಲೇ ಕರೆಂಟು ಕೈಕೊಟ್ಟಿತ್ತು. ಸೃಷ್ಟಿ ಕಪ್ಪು ಬಣ್ಣದಲ್ಲಿ ಅದ್ದಿ ತೆಗೆದಂತಿತ್ತು. ಎದ್ದು ಕ್ಯಾಂಡಲ್ ಬೆಳಗಿಸೋಣ ಎಂದರೆ ಕತ್ತಲಲಿ ಯಾವುದೂ ಕಾಣದು. ತಡಕಾಡುತ್ತ ಎದ್ದು ಬಂದು ಬಾಗಿಲು ತೆರೆದೆ. ಭಯದಿಂದ ಅಪ್ರಯತ್ನವಾಗಿ ಹೆಜ್ಜೆ ಹಿಂದಿರುಗಿಸಿದೆ.**

**ಆ ಕಾಳ ರಾತ್ರಿಯಲ್ಲಿ, ಕತ್ತಲೆಯೇ ಮೈಬಣ್ಣವಾದ ಅಪರಿಚಿತ ಹೆಂಗಸೊಬ್ಬಳು ನಿಂತಿದ್ದಳು. ಹೆಂಗಸಾ ಅವಳು? ಮುಪ್ಪಾನ ಮುದುಕಿ. ಸುಕ್ಕುಗಳನ್ನೇ ಅಡ್ಡಾದಿಡ್ಡಿಯಾಗಿ ನೇಯ್ದು ಅವಳ ಮುಖವನ್ನಾಗಿಸಲಾಗಿತ್ತು. ಜೋಲು ಚರ್ಮವೇ ಆಕೆಯ ಮೈಯಾಗಿದ್ದವು. ನಿಗಿ ನಿಗಿ ಕೆಂಡದಲ್ಲಿ ಸುಟ್ಟು ತೆಗೆದಂತಿತ್ತು ಅವಳ ಕೆಂಚು ಕೆಂಚು ಕೂದಲುಗಳು. ಕಣ್ಣುಗಳಲ್ಲಿ ಗಾಢ ಅಂಧಕಾರವಿತ್ತು. ಭಯದಿಂದ ನಾನು ಹಿಂದಡಿಯಿರಿಸಿದೆ. ಇನ್ನೇನು ಬಾಗಿಲು ಹಾಕುವ ಹಾಕಿಕೊಳ್ಳುವಷ್ಟರಲ್ಲಿ ಮಿಂಚಿನಂತೆ ಮುಂದೆ ಸರಿದ ಆಕೆ ನವಜಾತ ಶಿಶುವೊಂದನ್ನು ನನ್ನ ಕೈಗಿತ್ತು ಕತ್ತಲಲ್ಲಿ** ಕರಗಿಹೋದಳು. ನನಗೇ ಅರಿವಿಲ್ಲದಂತೆ ನಾನು ಕೈ ಚಾಚಿದ್ದೆ. ಒಂದರೆ ಕ್ಷಣ ನಾನು ಸ್ತಬ್ಧನಾದೆ. 'ಏಯ್ ' ಎಂದು



ನಾನು ಹೋಗಿ ಕರೆಯಬೇಕೆಂದುಕೊಂಡವನು ಸುಮ್ಮನಾದೆ. ಪ್ರಯೋಜನವಿಲ್ಲ, ಕತ್ತಲು ಎಲ್ಲವನ್ನು ನುಂಗಿ ಹಾಕಿ ಬಿಡುತ್ತದೆ.

ನನ್ನ ಕೈಗಳಲ್ಲಿ ಮಲಗಿದ್ದ ಮಗುವಿನತ್ತ ನೋಡಿದೆ. ಬುದ್ದನ ತೀವ್ರತೆಯಲ್ಲಿ ಧ್ಯಾನದಲ್ಲಿದ್ದಂತಿದೆ ಮಗು. ಶುದ್ಧತೆಯನ್ನು ಕರಗಿಸಿ ಅದರ ಕೆನ್ನೆಯನ್ನಾಗಿಸಲಾಗಿತ್ತು. ಎಳೆಯ ಅರಶಿನದ ಕೊಂಬನ್ನು ಮುರಿದು ಬೆರಳನ್ನಾಗಿಸಿದಂತಿತ್ತು. ಪ್ರೀತಿ ಉಕ್ಕಿ ಬಂದು ಮಗುವನ್ನು ಎದೆಗೆ ತಬ್ಬಿಕೊಂಡೆ. ಆಗ ತಾನೆ ಕುಡಿದ ಎದೆಹಾಲಿನ ಘಮ ನನ್ನ ಮೂಗಿಗಿಳಿಯಿತು.

ವಿವರಗಳಲ್ಲಿ ನೋಡಿದರೆ, ಮಗು ಚಿನ್ನದ ಬಣ್ಣದಲ್ಲಿತ್ತು. ಕುಡಿ ಬೇವಿನ ಹುಬ್ಬು, ಆಗ ತಾನೇ ಮೊಗ್ಗೊಡೆದ ತಾವರೆ ಗಾತ್ರದ ಪಾದ, ಪಾರದರ್ಶಕ ಬೆರಳುಗಳು, ಕಾಮನ ಬಿಲ್ಲಿನಿಂದ ಕದ್ದ ಬಣ್ಣದ ತುಟಿ. ತುಟಿಯಂಚಿನಲ್ಲಿ ನಿದ್ದೆಯಲ್ಲೇ ಒಂದು ಮುಗುಳು !

ನನ್ನ ಕೈಯಲ್ಲಿ ಮಲಗಿದ್ದ ಮಗು ಗಂಡಾ ಹೆಣ್ಣಾ??! ಒಂದರೆ ಕ್ಷಣ ಕುತೂಹಲ. ಮೆಲ್ಲಗೆ ಬಟ್ಟೆ ಮೇಲಕ್ಕೆ ಸರಿಸಿ ನೋಡಿದರೆ ಅನುಮಾನ ಪರಿಹಾರವಾಗುತ್ತದೆ. 'ಬೇಡ ಗಂಡಿನಲ್ಲಿ ಹೆಣ್ಣಿರಲಿ ಮುಗ್ಧತೆಯಲ್ಲಿ ವ್ಯತ್ಯಾಸವಿಲ್ಲವಲ್ಲ' ಅಂದುಕೊಂಡೆ.

''ಕಂದಾ ನಿನಗಾಗಿ ಇಷ್ಟು ದಿನ ಕಾಯುತ್ತಿದ್ದೆ. ನಿನ್ನ ಮುಂದೆ ನನ್ನ ಈವರೆಗಿನ ಎಲ್ಲಾ ಬಲಹೀನತೆಗಳನ್ನು ಮೀರಿ ಮತ್ತಷ್ಟು ಒಳ್ಳೆಯವನಾಗುತ್ತೇನೆ. ಕನಸುಗಳ ಊಟೆಯನ್ನೇ ಹೊರುತ್ತೇನೆ. ನಿನ್ನ ಸಾಂಗತ್ಯದಲ್ಲಿ ನನ್ನ ಕನಸುಗಳನ್ನೆಲ್ಲ ನನಸಾಗಿಸುತ್ತೇನೆ ಪ್ರಾಮಿಸ್'' ಹೀಗೆಂದುಕೊಂಡೆ.

ಅದು ನಿನ್ನೆ ಡಿಸೆಂಬರ್ 31ರ ಮಧ್ಯರಾತ್ರಿ. ಹಾಗೆ ಹಳೆಯ ವರ್ಷವೆಂಬ ಮುದುಕಿ ಹೊಸ ನಿರೀಕ್ಷೆಗಳ ಕೂಸನ್ನು ನನಗೆ ದಯಪಾಲಿಸಿ ಹೋಗಿದ್ದಳು. ಹೊಸ ವರ್ಷದ ಮಗು ನಿದ್ದೆಯಲ್ಲೇ ಕೆನ್ನೆಯರಲಿಸಿ ನಕ್ಕಿತ್ತು.

ಈ ಪುಟ್ಟ ಮಗುವನ್ನು ಒಳ್ಳೆಯ ಪೋಷಣೆ ಮಾಡಬೇಕು. ಅದರ ಆರೈಕೆಯೊಂದೇ ನನ್ನ ಕೆಲಸ. ಅದರ ಉನ್ನತಿ ಆಗಬೇಕೆಂದರೆ ನಾನು ದುಡಿಯಬೇಕು. ಒಂದು ದೃಢ ನಿಶ್ಚಯ ನನ್ನದಾಗಬೇಕು. ಮಾಡಿಕೊಂಡ ಪ್ಲಾನನ್ನು ತಕ್ಷಣಕ್ಕೆ ಇಂಪ್ಲಿಮೆಂಟ್ ಮಾಡಿಬಿಡಬೇಕು. ನಿರೀಕ್ಷಿಸಿದ ಫಲ ಪಡೆಯಲು ರಕ್ತ ರಾತ್ರಿಗಳನ್ನು ಹರಿಸಬೇಕು. ಅಗಾಧವಾದ ತಾಳ್ಮೆ ನನ್ನದಾಗಬೇಕು. ಇವೇ ತಾನೇ ಪ್ರತಿ ವರ್ಷದಾರಂಭದಲ್ಲಿನ ನಮ್ಮೆಲ್ಲರ ರೆಸೊಲ್ಯೂಷನ್ ?

ನಾವು ಪ್ರತಿ ವರ್ಷದ ಪ್ರಾರಂಭದಲ್ಲಿ, ಹೊಸ ಡೈರಿ ತಗೋಳ್ಳೋದೇನು, ಟಾರ್ಗೆಟ್ ಹಾಕ್ಕೊಳ್ಳೋದೇನು, ಪ್ಲಾನ್? ಸ್ಕೆಚ್ಚು ಮಾಡೋದೇನು ? ಆದರೆ ನಮ್ಮ ಪ್ಲಾನು ಪ್ರತಿ ಬಾರಿಯೂ ಹಳಿ ಜಾರಿದೆ. ಆರಂಭ ಶೂರತೆಯಿಂದ ಪ್ರಾರಂಭವಾದ ನಡಿಗೆ ಅಡಿಗಡಿಗೆ ನಿಂತು ಬಿಟ್ಟಿದೆ. ತಿಂಗಳೆರಡು ಕಳೆಯುವಷ್ಟರಲ್ಲೇ, ವರ್ಷ ಹಳೆಯದಾದ ಅನುಭವ. ಕಷ್ಟ ಸಹಿಸಿಕೊಳ್ಳಲಾಗದೆಯೋ ಅಥವಾ ಆಸಕ್ತಿ ಮತ್ತು ತಾಳ್ಮೆ ಕಳೆದುಕೊಂಡೋ ಅಥವಾ ಸಾಕಷ್ಟು ಡಿಟರ್ಮಿನೇಷನ್ ನ ಕೊರತೆಯೋ ಬಂಡಿ ಅರ್ಧ ದಾರಿಯಲ್ಲೇ ಜಖಂ.

ಆದರೆ, ಈ ವರ್ಷ ಹಾಗಲ್ಲ, ಯಾಕೆಂದರೆ ಇದು 2026 !

ಈ ವರ್ಷ, ಮಿಲ್ಲೇನಿಯಂನ ನಂತರ ಭರ್ತಿ 26ರ ನಿಗಿನಿಗಿ ಯವ್ವನ ತುಂಬಿಕೊಂಡ ಹೊಳಪು ಕಣ್ಣುಗಳ ತರುಣಿಯಂತಹಾ ಆರೋಗ್ಯವಂತ ವರ್ಷ. ಈ ಸಲ ನಮ್ಮ ಟಾರ್ಗೆಟ್ ಯಾವುದೇ ಇರಲಿ, ನಮ್ಮ ಗುರಿ ಎಂದೂ ಮಿಸ್ಸಾಗಲ್ಲ. ಸಕ್ಸೆಸ್ ಅನ್ನುವುದು ನಮ್ಮ ಕಣ್ಣಳತೆಯಲ್ಲೇ ಇನ್ನು ಕೇವಲ 365 ದಿನದ ದೂರದಲ್ಲಿದೆ.

ಜಸ್ಟ್ ಸ್ಟಾರ್ಟ್. ವಿಶ್ ಯೂ ಎ ವಂಡರಫುಲ್ ಆಂಡ್ ಮೋಸ್ಟ್ ಸಕ್ಸಸ್ ಫುಲ್ ನ್ಯೂ ಇಯರ್ 2026 !, ನಾನು ನಿಮ್ಮ ಸುದರ್ಶನ್ ಬಿ ಪ್ರವೀಣ್, ಬೆಳಾಲು.

▸ಸುದರ್ಶನ್ ಬಿ. ಪ್ರವೀಣ್, ಬೆಳಾಲು

# ಬಿಗ್‌ಬಾಸ್ ಮಾಳು ಔಟ್, ದುರಹಂಕಾರ ಇನ್!

## ಅಲ್ಲಲೇ ಮಾಳ್ಯ ಉ. ಕರ್ನಾಟಕದಾಗ ಎಲ್ಲರೂ ಅಳಕುಂತರ ಅಂದಿ ಅಲ್ಲ.... ಬಿತ್ತು ನೋಡಿ ಗೂಸಾ..!



ನಾನು ಎಲಿಮಿನೇಟ್ ಆಗಿದ್ದಕ್ಕೆ ಉ. ಕರ್ನಾಟಕ ಅಳುತ್ತಿದೆ ಎಂದು ಮಾಳು ಆಳುವ ಸ್ಟೈಲಿನಲ್ಲಿ ಹೇಳಿ ಈಗ ನಗೆ ಪಾಟಲೀಗೆ ಈಡಾಗಿದ್ದಾರೆ. ಸ್ವತಃ, ಇಷ್ಟು ದಿನ ಮಾಳು ನಿಪನಾಳರನ್ನು ಬೆಂಬಲಿಸಿಕೊಂಡು ಬಂದಿದ್ದ ಉತ್ತರ ಕರ್ನಾಟಕದ ಮಂದಿ, ತಮ್ಮ ಎಂದಿನ ಕಡಕ್ ಖಾರದ ಮಾತು ಬಾಯಿಗೆತ್ತಿಕೊಂಡಿದ್ದಾರೆ.

ಬಿಗ್‌ಬಾಸ್ ಮನೆಯಿಂದ ಈ ವಾರ ಅಚ್ಚರಿ ಎಲಿಮಿನೇಷನ್ ನಡೆದಿದ್ದು, ಉತ್ತರ ಕರ್ನಾಟಕದ ಪ್ರತಿಭೆ ಮಾಳು ನಿಪನಾಳ ಎಲಿಮಿನೇಟ್ ಆಗಿ ಬಿಗ್‌ಬಾಸ್‌ನಿಂದ ಹೊರಬಂದಿದ್ದಾರೆ. ಈ ಬೆನ್ನಲ್ಲಿ ಅವರು ಬಿಗ್ ಬಾಸ್ ಮನೆಯಲ್ಲಿ ನಾನು ಇನ್ನೂ ಇರಬೇಕಿತ್ತು. ನಾನು ಎಲಿಮಿನೇಟ್ ಆಗುವಂತಹ ಸ್ಪರ್ಧಿ ಅಲ್ವೇ ಅಲ್ಲ. ಯಾರೇ ವಿನ್ ಆದ್ರೂ ಕೂಡ ನಾನು ಅದನ್ನು ಒಪ್ಪಲ್ಲ ಎಂದು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಅಷ್ಟು ಆಕ್ರೋಶ, ಗೋಳಾಟ ಮಾತ್ರವಲ್ಲದೆ ನಾನು ಎಲಿಮಿನೇಟ್ ಆಗಿರುವುದಕ್ಕೆ ಇಡೀ ಉತ್ತರ ಕರ್ನಾಟಕ ಅಳುತ್ತಿದೆ. ನನ್ನ ಜನರು ಬೇಸರ ಪಟ್ಟಿ ಕೊಂಡಿದ್ದಾರೆ ಎಂದೆಲ್ಲ ಸಂದರ್ಶನದಲ್ಲಿ ಮಾತನಾಡಿದ್ದಾರೆ. ಅಲ್ಲದೆ ನಾನೇ ಗೆಲ್ತೀನಿ ಎನ್ನುವ ಭರವಸೆ ನನಗಿತ್ತು' ಎಂದಿದ್ದಾರೆ. 'ನನಗೆ ತಾಳ್ಮೆ, ಆಡುವ ಛಲ ಎರಡೂ ಇತ್ತು, ದೇವರ ಆಶೀರ್ವಾದ, ಜನರ ಬೆಂಬಲ ಎಲ್ಲವೂ ಇತ್ತು. ನಾನು ಮೊದಲಿಗೆ ಎರಡು ವಾರವಷ್ಟೇ ಇರಬಹುದು ಎಂದು ಭಾವಿಸಿದ್ದೆ. ಆದ್ರೆ ಬರಬ್ಬರಿ 13 ವಾರ ನನ್ನ ಉಳಿಸಿದ್ದಾರೆ. ಜನ ನನ್ನ ಇಲ್ಲಿವರೆಗೆ ಉಳಿಸಿದ್ದಾರೆ ಅಂದ್ರೆ, ಫೈನಲ್ ವರೆಗೆ ನನ್ನ ಉಳಿಸಲ್ಲ ಅಂತ ಹ್ಯಾಂಗ್ ನಂಬೋದು?' ಎಂದು ಆಕ್ರೋಶ ಹೊರಹಾಕಿದ್ದಾರೆ. ಈ ಬೆನ್ನಲ್ಲೇ ಮಾಳು ಅವರಿಗೆ ಉತ್ತರ ಕರ್ನಾಟಕದ ಮಂದಿ ತಮ್ಮದೇ ಭಾಷೆಯಲ್ಲಿ ಮಿರ್ಚಿ ಮಿಕ್ಸ್ ಹೊಡೆದು ಉತ್ತರವನ್ನು ಕೊಟ್ಟಿದ್ದಾರೆ.

'ಅಲ್ಲಲೇ ಮಾಳ್ಯ ಉತ್ತರ ಕರ್ನಾಟಕದಾಗ ಎಲ್ಲರೂ ಅಳಕುಂತರ ಅಂದಿ ಅಲ್ಲ.. ನೀನ್ ನಿನ್ನ ತಾಲೂಕ ಬಿಟ್ಟ ಯಾರಿಗೂ ಗೊತ್ತಿಲ್ಲ. ನೀನು ಆಟ ಆಡಿದ್ದಿ ಅಂದ್ರ ಸಪೋರ್ಟ್ ಮಾಡ್ತಿದ್ರು. ಏನು ಮಾಡ್ಲಾರ್ದ ಇಲ್ಲಿ ಬಂದ್ ಅಳ ಕುಂತ್ರ ಏನು ಆಗಲ್ಲ' ಎಂದು ಟ್ವಿಟರ್ ಬಳಕೆದಾರರು ಟ್ವೀಟ್ ಮಾಡಿದ್ದಾರೆ. ಇನ್ನೂ ಕೆಲವರು, 'ಬಿಗ್ ಬಾಸ್ ಮನೆಯಲ್ಲಿ ಇವ್ನನ್ನ ನೋಡ್ದಾಗ ಈತ ಒಬ್ಬ ಪ್ರಭುದ್ದ ಅನ್ಕೊಂಡಿದ್ದೆ ಆದರೆ, ತನ್ನ ಬಿಟ್ರೆ ಬಿಗ್ ಬಾಸ್ ಗೆಲ್ಲೋ ಯೋಗ್ಯತೆ ಯಾರಿಗೂ ಆ ಮನೇಲಿಲ್ಲ ಅನ್ನೋ ಮಾತು. ಮೂರ್ಖತನದ ಪರಮಾವಧಿ. ಒಳಗಡೆ ಗಳಿಸಿದ್ದು ಹೊರಗಡೆ ಬಂದು ಕಳ್ಕೊಳ್ಳೋದು ಅಂತಾರಲ್ಲ. ಅದು ಇದೇ ಇರ್ಬೇಕು' ಎಂದು ಬರೆಯಲಾಗಿದೆ.

# ಸರ್ಕಾರಿ ಶಾಲೆಗಳಲ್ಲಿ ಪೇರೆಂಟ್ ಟೀಚರ್ ಮೀಟಿಂಗ್ ಕಡ್ಡಾಯ, ವೇಳಾಪಟ್ಟಿ ಪ್ರಕಟ

• **ಹೊಸ ಕನ್ನಡ, ಬೆಂಗಳೂರು**

ರಾಜ್ಯದ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಪೋಷಕರು ಶಿಕ್ಷಕರ ಮಹಾಸಭೆ ನಡೆಸಲು ಶಾಲಾ ಶಿಕ್ಷಣ ಇಲಾಖೆ ಸೂಚನೆ ನೀಡಿದೆ. ಜ. 3 ಮತ್ತು ಫೆ. 28ರಂದು ಪೇರೆಂಟ್ ಟೀಚರ್ ಮೀಟಿಂಗ್ ನಡೆಸಲು ವೇಳಾಪಟ್ಟಿ ಪ್ರಕಟ ಮಾಡಲಾಗಿದೆ. ಕಳೆದ ನ.14 ರಂದು ರಾಜ್ಯಾದ್ಯಂತ ಪಾಲಕರು ಮತ್ತು ಶಿಕ್ಷಕರ ಸಭೆ ನಡೆಸಲಾಗಿತ್ತು. ಪ್ರತಿ ಎರಡು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸಲು ಸೂಚಿಸಿದಂತೆ ಸಭೆಯ ದಿನಾಂಕ ನಿಗದಿ ಮಾಡಿ ಸುತ್ತೋಲೆ ಹೊರಡಿಸಲಾಗಿದೆ. ತಾಲೂಕು ಮತ್ತು ಜಿಲ್ಲಾಮಟ್ಟದ ಶಾಲೆಗಳಲ್ಲಿ ಮಹಾಸಭೆ ನಡೆಸಿದ ಮಾಹಿತಿ, ಹಾಜರಾದ ವಿದ್ಯಾರ್ಥಿಗಳು, ಆಹ್ವಾನಿಸಿದ ಪೋಷಕರು ಹಾಗೂ ಹಾಜರಾದ ಪೋಷಕರ ಸಂಖ್ಯೆಯ ಮಾಹಿತಿ ನೀಡುವಂತೆ ಮತ್ತು ನ. 14ರ ಸಭೆಗೆ ನೀಡಲಾದ ಸೂಚನೆ ಪಾಲಿಸುವಂತೆ ತಿಳಿಸಲಾಗಿದೆ.

# ಪರಿಷತ್ತಿನ ಚುನಾವಣೆ -26 ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ

• **ಹೊಸ ಕನ್ನಡ, ಬೆಂಗಳೂರು**

ಕರ್ನಾಟಕ ವಿಧಾನ ಪರಿಷತ್ತಿನ ಚುನಾವಣೆ 2026ಕ್ಕೆ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆಯಲಿರುವ ಚುನಾವಣೆಗಳಿಗೆ ಅಭ್ಯರ್ಥಿಗಳ ಹೆಸರನ್ನು ಅನುಮೋದಿಸಿದ್ದಾರೆ. ಪಶ್ಚಿಮ ಪದವೀಧರ ಚಚ ಮೋಹನ್ ಲಿಂಬಿಕಾಯಿ, ಆಗ್ನೇಯ ಪದವೀಧರ ಶಶಿ ಹುಲಿಕುಂಟೆ, ಈಶಾನ್ಯ ಶಿಕ್ಷಕರ ಕ್ಷೇತ್ರ ಶರಣಪ್ಪ ಮಟ್ಟೂರ್, ಬೆಂಗಳೂರು ಶಿಕ್ಷಕರ ಕ್ಷೇತ್ರ ಪುಟ್ಟಣ್ಣ ಇವರುಗಳೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚಿಸಿದ ಅಭ್ಯರ್ಥಿಗಳು.

# ಶಾಲೆಗಳಲ್ಲಿ ದಿನಪತ್ರಿಕೆ ಓದುವ ಆದೇಶ!

• **ಹೊಸ ಕನ್ನಡ, ಬೆಂಗಳೂರು**



ರಾಜ್ಯದ ಸರಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳು ನಿತ್ಯ ದಿನಪತ್ರಿಕೆ ಓದುವ ಆದೇಶ ಅನುಷ್ಠಾನಗೊಳಿಸುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಲ್ಲಿ ಮನವಿ ಮಾಡಿದೆ. ಈ ಬಗ್ಗೆ ಮುಖ್ಯ ಪತ್ರ ಬರೆದಿರುವ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ, ''ಉತ್ತರಪ್ರದೇಶ ಸರಕಾರ ನಿತ್ಯ ಶಾಲೆಗಳಲ್ಲಿ ಮಕ್ಕಳು ದಿನಪತ್ರಿಕೆ ಓದುವ ಬಗ್ಗೆ ಆದೇಶ ಹೊರಡಿಸಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲೂ ಕ್ರಮ ಕೈಗೊಳ್ಳಬೇಕು'' ಎಂದು ಮನವಿ ಮಾಡಿದ್ದಾರೆ. ''ಇಂಟರ್ನೆಟ್ ಶಿಕ್ಷಣ, ಮನರಂಜನೆ ಹಾಗೂ ಸಾಮಾಜಿಕ ಜಾಲತಾಣಗಳಿಂದ ಮಕ್ಕಳಲ್ಲಿ ಜ್ಞಾಪಕ ಶಕ್ತಿ ಕೊರತೆ, ಶ್ರವಣದೋಷ, ದೈಹಿಕ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದ ಲಕ್ಷಣಗಳು ಕಂಡು ಬರುತ್ತಿವೆ. ಮಕ್ಕಳು 10 ರಿಂದ 15 ನಿಮಿಷ ದಿನಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಕಾರಿ ಎಂದು ಆಯೋಗ ಸಲಹೆ ನೀಡಿದೆ.

# ಬೆಕ್ಕಿನ ಮರಿಗೆ ಚೀಟಿ ಹರಿದ ಬಸ್ ಕಂಡಕ್ಟರ್

• **ಹೊಸ ಕನ್ನಡ, ಮೈಸೂರು**

ಬಸ್ಸು, ರೈಲುಗಳಲ್ಲಿ ಕುರಿ, ಕೋಳಿ, ನಾಯಿ ಮರಿಗಳನ್ನು ಒಯ್ಯುವಾಗ ಅವುಗಳಿಗೆ ಟಿಕೆಟ್ ವಿಧಿಸುವುದನ್ನು ನೋಡಿದ್ದೇವೆ. ಆದರೆ ಇದೀಗ ಇಲ್ಲೊಂದೆಡೆ ಬಸ್ಸಿನಲ್ಲಿ ಬೆಕ್ಕಿನ ಮರಿಗೆ ಕಂಡಕ್ಟರ್ ಅದಕ್ಕೆ ಚೀಟಿ ಹರಿದಿದ್ದಾರೆ.

ಮೈಸೂರು? ಮಡಿಕೇರಿಗೆ ಹೋಗುವ ಕೆಎಸ್ ಆರ್ ಟಿಸಿ ಬಸ್ ನಲ್ಲಿ ಪ್ರಯಾಣಿಕರು ಒಬ್ಬರು ಬೆಕ್ಕಿನ ಮರಿಯನ್ನು ಕೊಂಡು ಹೋಗಿದ್ದಾರೆ.

ಇದನ್ನು ಗಮನಿಸಿದ ಕಂಡಕ್ಟರ್, ಅದು ಬೆಕ್ಕಿನ ಮರಿಯೆ ಆಗಲಿ, ಮಕ್ಕಳೇ ಆಗಲಿ, ಆಫ್ ಟಿಕೆಟ್ ತೆಗೆದುಕೊಳ್ಳಬೇಕು ಎಂದು ಅರ್ಧ ಟಿಕೆಟ್ ಕೊಟ್ಟಿದ್ದಾರೆ.

ಈಗ ಬೆಕ್ಕಿಗೆ ಕೂಡಾ ಕ್ಯಾಟ್ ಪಾಸ್ ಮಾಡಬೇಕಾ? ಅದಲ್ಲದೆ ದುಡ್ಡು ತೆಗೆದು ಸೀಟು ಕೂಡಾ ಕೊಟ್ಟಿಲ್ಲ. ಇದು ನ್ಯಾಯನಾ? ಎಂದು ಸೋಶಿಯಲ್ ಮೀಡಿಯಾದಲ್ಲಿ ಬಳಕೆದಾರರೊಬ್ಬರು ಬರೆದು. ಈ ಪೋಸ್ಟ್'ನ್ನು ಸಾರಿಗೆ ಸಚಿವ ರಾಮಲಿಂಗ ರೆಡ್ಡಿಗೂ ಟ್ಯಾಗ್ ಮಾಡಿದ್ದಾರೆ.

# ಮಗು ಮರೆತು ಬಸ್ ಹತ್ತಿದ ತಾಯಿ

• **ಹೊಸ ಕನ್ನಡ, ಧರ್ಮಸ್ಥಳ**

ಪ್ರವಾಸಕ್ಕೆ ತೆರಳಿ ಮರಳು ಸಂದರ್ಭ ಕೆಎಸ್ಆರ್‌ಟಿಸಿ ಬಸ್ ಬದಲಾವಣೆಯ ಗೊಂದಲದಿಂದ ತಾಯಿಯಿಂದ ಬೇರ್ಪಟ್ಟಿದ್ದ ಕೋಲಾರದ ಬಾಲಕಿಯನ್ನು ಪೊಲೀಸರು ಹಾಗೂ ಸಾರ್ವಜನಿಕರು ಸುರಕ್ಷಿತವಾಗಿ ಅಮ್ಮನ ಮಡಿಲು ಸೇರಿಸಿದ್ದಾರೆ. ಕೋಲಾರ ಮೂಲದ ಮಹಿಳೆ ಹಾಗೂ ಅವರ ಮಗಳು ಸೇರಿದಂತೆ ಆರು ಜನರ ತಂಡ ಧರ್ಮಸ್ಥಳ ಪ್ರವಾಸಕ್ಕೆ ತೆರಳಿತ್ತು. ಸಕಲೇಶಪುರ ತಾಲೂಕಿನ ಬಾಗೆ ಗ್ರಾಮದ ಬಳಿ ಇವರು ಪ್ರಯಾಣಿಸುತ್ತಿದ್ದ ಬಸ್ ತಾಂತ್ರಿಕ ದೋಷದಿಂದ ಕೆಟ್ಟು ನಿಂತಿತ್ತು. ಈ ವೇಳೆ ಬಸ್ ನಿರ್ವಾಹಕರು ಪ್ರಯಾಣಿಕರನ್ನು ಮತ್ತೊಂದು ಬಸ್ಸಿಗೆ ಹತ್ತಿಸಿದ್ದರು. ತಾಯಿ ಹಾಗೂ ಉಳಿದವರು ಒಂದು ಬಸ್ ಹತ್ತಿದರೆ, 3ನೇ ತರಗತಿ ವಿದ್ಯಾರ್ಥಿನಿ ಬಾಲಕಿ ಮತ್ತೆ ಕೆಟ್ಟು ನಿಂತಿದ್ದ ಬಸ್ಸನ್ನೇ ಹತ್ತಿದ್ದಾಳೆ. ಬಸ್ ದುರಸ್ತಿಯಾದ ನಂತರ ಆ ಬಸ್ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದಾಗ ಬಾಲಕಿ ಒಬ್ಬಳೇ ಇರುವುದನ್ನು ಗಮನಿಸಿದ ಸಹ ಪ್ರಯಾಣಿಕರು ಗ್ರಾಮಾಂತರ ಠಾಣಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಕಾರ್ಯಪ್ರವೃತ್ತರಾದ ಗ್ರಾಮಾಂತರ ಪಿಎಸ್ ಪ್ರಸನ್ನ ಬಾಲಕಿಯ ಬಳಿ ತಾಯಿಯ ಮೊಬೈಲ್ ಸಂಖ್ಯೆ ಪಡೆದು ಸಂಪರ್ಕಿಸಿದರು. ಆಗ ಬಾಲಕಿಯ ತಾಯಿ ಮತ್ತು ಉಳಿದವರು ಅಷ್ಟರಲ್ಲಾಗಲೇ ಹಾಸನ ಸಮೀಪ ತಲುಪಿದ್ದರು. ನಂತರ ಸಾರ್ವಜನಿಕರ ಸಹಕಾರ ಪಡೆದು ಬಾಲಕಿಯನ್ನು ತಾಯಿ ಜೊತೆ ಸೇರಿಸಿದರು.

# ಹಲವು ಪರೀಕ್ಷೆ ಮುಂದೂಡಿಕೆ

• **ಹೊಸ ಕನ್ನಡ, ನವದೆಹಲಿ**

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) 10 ಮತ್ತು 12 ನೇ ತರಗತಿಯ ಹಲವು ವಿಷಯಗಳ ಅಂತಿಮ ಪರೀಕ್ಷಾ ದಿನಾಂಕವನ್ನು ಮಾರ್ಪಡಿಸಿದೆ. 2026ರ ಮಾ.3 ರಂದು ನಡೆಯಬೇಕಿದ್ದ ಪರೀಕ್ಷೆಗಳನ್ನು ಆಡಳಿತಾತ್ಮಕ ಕಾರಣ ನೀಡಿ ಮಂಡಳಿಯು ಮುಂದೂಡಿದೆ.

ಹತ್ತನೇ ತರಗತಿಯ ಒಟ್ಟು 13 ಮತ್ತು 12 ತರಗತಿಯ 1 ಪರೀಕ್ಷೆಯ ದಿನಾಂಕವನ್ನು ಬದಲಾವಣೆ ಮಾಡಲಾಗಿದೆ. ಮಾ.3 ರಂದು ನಿಗದಿಯಾಗಿದ್ದ 10ನೇ ತರಗತಿಯ ಟಿಬೆಟಿಯನ್, ಜರ್ಮನ್, ಎನ್‌ಸಿಸಿ, ಕಾಶ್ಮೀರಿ ಸೇರಿದಂತೆ ಹಲವು ಪರೀಕ್ಷೆಗಳನ್ನು ಮಾ.11 ಕ್ಕೆ ಮುಂದೂಡಲಾಗಿದೆ.

2026ರ ಮಾರ್ಚ್ 3 ರಂದು ನಡೆಯಬೇಕಿದ್ದ 12 ನೇ ತರಗತಿಯ ಕಾನೂನು ಅಧ್ಯಯನ ವಿಷಯದ ಪರೀಕ್ಷೆಯನ್ನು ಎಪ್ರಿಲ್ 10 ಕ್ಕೆ ಮುಂದೂಡಲಾಗಿದೆ. ಉಳಿದ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಪ್ರಕಟಿಸಲಾಗಿದ್ದ ವೇಳಾಪಟ್ಟಿಯೂ ಮುಂದುವರಿಯಲಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

# 'ಸಂಗೀತಾ' ದಿಂದ ನ್ಯೂ ಲೂಸ್ ಆಫರ್

• **ಹೊಸ ಕನ್ನಡ, ಬೆಂಗಳೂರು**

ದೇಶದ ಅಗ್ರ ಮಲ್ಟಿಬ್ರಾಂಡ್ ಗ್ಯಾಜೆಟ್ ರಿಟೇಲರ್ ಸಂಗೀತಾದಲ್ಲಿ ಈಗ ನಂಬಲಸಾಧ್ಯವಾದ ಒಂದು ವಿಶೇಷ ಕೊಡುಗೆಯನ್ನು ಜಾರಿಗೆ ತರಲಾಗಿದೆ.



ನ್ಯೂ ಲೂಸ್ ಆಫರ್ ಎಂಬ ಈ ವಿನೂತನ ಕೊಡುಗೆಯ ಮೂಲಕ ಮೊಬೈಲ್ ಫೋನ್‌ಗಳ ಎಲ್ಲ ರೀತಿಯ ಹಾನಿ, ಕಳವು ಮುಂತಾದವುಗಳಿಗೆ ವಿಮೆ ರಕ್ಷಣೆ ಸಿಗಲಿದೆ. ಮೊಬೈಲ್ ಫೋನ್ ಬಿದ್ದು ಹಾಳಾದರೆ, ಸ್ಕ್ರೀನ್ ಹಾಳಾದರೆ, ನೀರಿಗೆ ಬಿದ್ದರೆ, ಕಳವಾದರೆ- ಯಾವುದೇ ರೀತಿಯಲ್ಲೂ ಮೊಬೈಲ್ ಹಾನಿಗೀಡಾದರೂ ಷರತ್ತುರಹಿತವಾಗಿ ಈ ಯೋಜನೆಯಡಿಯಲ್ಲಿ ವಿಮೆ ರಕ್ಷಣೆ ಸಿಗಲಿದೆ. ಜತೆಗೆ, ನಿಮ್ಮ ಮನೆಯ ಹಳೆಯ ಯಾವುದೇ ಗೃಹೋಪಕರಣ ವಸ್ತುಗಳಿಗೂ 365 ದಿನಗಳ ಮಿತಿ ರಹಿತ ದುರಸ್ತಿ ಸೇವೆಯನ್ನೂ ಸಂಗೀತಾ ನೀಡಲಿದೆ. ಸಂಗೀತಾದ ಈ ಕೊಡುಗೆಯಿಂದಾಗಿ ಮೊಬೈಲ್ ಬಳಸುವಾಗ ಹೆಚ್ಚು ಆತಂಕಪಡಬೇಕಾಗಿಲ್ಲ. ವಿಮೆ ಯಾವುದಕ್ಕೆಲ್ಲ ಅನ್ವಯ ಆಗುತ್ತದೆ ಎಂದು ಚಿಂತಿಸುವ ಅಗತ್ಯವೂ ಇಲ್ಲ ಎಂದು ಸಂಸ್ಥೆಯ ಪ್ರಕಟನೆ ತಿಳಿಸಿದೆ.

# ಪ್ರಿಯಾಂಕಾ ಗಾಂಧಿ ಪುತ್ರನಿಗೆ ಎಂಗೇಜ್ಮೆಂಟ್!

## ಅಮ್ಮ ಹಿಂದೂ, ಅಪ್ಪ ಕ್ರಿಶ್ಚಿಯನ್, ಸೊಸೆ ಧರ್ಮ ಏನಿರಬಹುದು?

• **ಹೊಸ ಕನ್ನಡ, ನವದೆಹಲಿ**

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಪುತ್ರ ರೈಹಾನ್ ವಾದ್ರಾ ಮದುವೆ ಎಂಗೇಜ್ ಮೆಂಟ್ ನಡೆದಿದೆ. ಗಾಂಧಿ ಕುಟುಂಬದ ಕುಡಿ, ರೈಹಾನ್ ವಾದ್ರಾ ಮದುವೆಯಾಗುವ ಮೂಲಕ ಪ್ರಿಯಾಂಕ ಗಾಂಧಿ ಅತ್ತೆಯಾಗಲಿದ್ದಾರೆ. ಈ ಸಂದರ್ಭ ಅಮ್ಮ ಹಿಂದೂ, ಅಪ್ಪ ಕ್ರಿಶ್ಚಿಯನ್, ಸೊಸೆ ಧರ್ಮ ಏನಿರಬಹುದು? ಅನ್ನೋದು ಜನರಲ್ಲಿ ಮೂಡಿದ ಬೇಡದ ಕುತೂಹಲ! ಇದೀಗ 25ರ ಹರೆಯದ ರೈಹಾನ್ ವಾದ್ರಾ, ತನ್ನ 7 ವರ್ಷಗಳ ಗೆಳತಿ ಅವ್ವೆವಾ ಜೊತೆ ಮದುವೆಯಾಗುತ್ತಿದ್ದು, ಸೋಮವಾರ ಕುಟುಂಬಸ್ಥರು ಪರಸ್ಪರ ಈ ಸಂಬಂಧ ಮಾತುಕತೆ ನಡೆಸಿ ಮದುವೆ ನಿಶ್ಚಯ ಮಾಡಿದ್ದಾರೆ. ಈ ಖುಷಿಯ ಸಂದರ್ಭ ಅವ್ವೆವಾ, ರೈಹಾನ್ ಜೊತೆಗಿರುವ ಪೋಟೋವನ್ನ ತನ್ನ ಸ್ಟೇಟಸ್‌ನಲ್ಲಿ ಅಪ್‌ಲೋಡ್ ಮಾಡಿದ್ದಾಳೆ.

**ಮಿಕ್ಸ್ ಮಿಕ್ಸ್ ಫ್ಯಾಮಿಲಿ:** ಜನರು ಕುತೂಹಲ ಇಟ್ಟುಕೊಂಡಂತೆ, ಗಾಂಧೀ ಫ್ಯಾಮಿಲಿ ಮತ್ತೊಂದು ಧರ್ಮದ ವ್ಯಕ್ತಿಯ ಜತೆ ಕೌಟುಂಬಿಕ ಸಂಬಂಧ ಶುರು ಮಾಡಲಿದೆ. ಪ್ರಿಯಾಂಕಾ ಗಾಂಧಿ ಪುತ್ರ ರೈಹಾನ್ ವಾದ್ರಾ ಮದುವೆಯಾಗುತ್ತಿರುವುದು ಅವ್ವೆವಾ ಬೇಗ್ ಎಂಬ ಮುಸ್ಲಿಂ ಹುಡುಗಿಯನ್ನು. ಆಕೆ ದೆಹಲಿಯಲ್ಲಿ ಜರ್ನಲಿಸಂ ಮತ್ತು ಕಮ್ಯೂನಿಕೇಷನ್ ವಿದ್ಯಾರ್ಥಿಯಾಗಿದ್ದು ಫೋಟೋಗ್ರಫಿ ಆಕೆಯ ಆಯ್ಕೆ. ಈಕೆ ಮಾಧ್ಯಮ ಸಂಸ್ಥೆಗಳಲ್ಲೂ ಕೆಲಸ ಮಾಡಿರುವ ಅನುಭವವಿದೆ. ಈಕೆಯ ತಂದೆ ಇಮ್ರಾನ್ ಬೇಗ್ ಉದ್ಯಮಿಯಾಗಿದ್ದಾರೆ. ತಾಯಿ ನಂದಿತಾ ಬೇಗ್ ಇಂಟೀರಿಯರ್ ಡಿಸೈನರ್. ಪ್ರಿಯಾಂಕಾ ಹಾಗೂ ನಂದಿತಾ ಬಹಳ ಕಾಲದ ಗೆಳತಿಯರು. ದೆಹಲಿ ಕಾಂಗ್ರೆಸ್ ಕೇಂದ್ರ ಕಚೇರಿ ಇಂದಿರಾ ಭವನ್‌ನ ಇಂಟೀರಿಯರ್ ಡಿಸೈನ್ ಮಾಡುವುದಕ್ಕೂ ನಂದಿತಾ ಬೇಗ್, ಪ್ರಿಯಾಂಕಾಗೆ ಸಹಾಯ ಮಾಡಿದ್ದಾರೆ ಎನ್ನಲಾಗಿದೆ. ಕಾಂಗ್ರೆಸ್ ಕಚೇರಿಯ ಒಳಗೆ ಬಂದವರು ಮನೆಗೆ ಬರದೆ ಇರ್ತಾರಾ? ಮಗಳು ಪ್ರಿಯಾಂಕಾ ಗಾಂಧಿಯ ಮನೆಯೊಳಗೆ ಬಲಗಾಲಿಟ್ಟು ಒಳ ಬರಲಿದ್ದಾಳೆ. (ಬಲಗಾಲು ಇಟ್ಟು ಒಳಬರುವ ಖಾತರಿ/ಅಭ್ಯಾಸ ಅವರಿಗೆ ಇದ್ಯೋ ಇಲ್ವೋ, ಗೊತ್ತಿಲ್ಲ!)



ತಾತ ರಾಜೀವ್ ಗಾಂಧಿ ಥರ ಮೊಮ್ಮಗ/ಮೊಮ್ಮಗಳ ಪೋಟೋ ಹುಚ್ಚು ರೈಹಾನ್ ವಾದ್ರಾ ಕೂಡ ಫೋಟೋಗ್ರಫಿಯನ್ನ ವೃತ್ತಿ ಮಾಡಿಕೊಂಡಿದ್ದು ಹಲವು ತನ್ನ ಛಾಯಾಚಿತ್ರಗಳನ್ನ ಪ್ರದರ್ಶನಕ್ಕಿಟ್ಟಿದ್ದರು. ತಾತ ರಾಜೀವ್ ಗಾಂಧಿ ಕೂಡ ಫೋಟೋಗ್ರಫಿಯಲ್ಲಿ ಪರಿಣತಿ ಹೊಂದಿದ್ದರು. ಇದೀಗ ಮೊಮ್ಮಗನ ಗೆಳತಿ ಕೂಡಾ ಕ್ಯಾಮರಾ ಕೈಯಲ್ಲಿ ಹಿಡಿದೇ ಬಂದಿದ್ದಾಳೆ. ಶುಭಸ್ಯ ಶೀಘ್ರಂ ಎಂದು ಮದುವೆಗೆ ಬೊಕೆ ಆರ್ಡರ್ ಮಾಡಿ ಕುಂತಿದೆ ಕಾಂಗ್ರೆಸ್ ಪಾಳಯ.




# ಹೊಸವರ್ಷ ಸಂಭ್ರಮ: ಮಂದಿ ಮದಿರೆ ಹೀರಿದ್ದೆ ಹೀರಿದ್ದು, ಹರಿದು ಬಂದ ಆದಾಯ

• **ಹೊಸ ಕನ್ನಡ, ಬೆಂಗಳೂರು**

ಹೊಸ ವರ್ಷದ ಹಿನ್ನೆಲೆ ರಾಜ್ಯ ಸರ್ಕಾರಕ್ಕೆ ಮದ್ಯ ಮಾರಾಟದಿಂದ ಭರ್ಜರಿ ಆದಾಯ ಸಂಗ್ರಹವಾಗಿದೆ. ಕರ್ನಾಟಕದ ಮದ್ಯದ ಮಂದಿ ಬೇಕಾಬಿಟ್ಟಿ ಹೀರಿದ್ದಾರೆ. ಆದಾಯ ಮಧ್ಯದ ಜತೆ ಬೊಕ್ಕಸಕ್ಕೆ ಹರಿದಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಡಿಸೆಂಬರ್‌ನಲ್ಲಿ 454.58 ಕೋಟಿ ರೂ. ಹೆಚ್ಚು ಅಬಕಾರಿ ಆದಾಯ ಸಂಗ್ರಹವಾಗಿದೆ.

ಯಾವ ವರ್ಷ ಎಷ್ಟು?

2024ರ ಡಿ.30 ರಂದು 154.04 ಕೋಟಿ ರೂ., ಡಿ.31 ರಂದು 266. 73 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು. ಆದರೆ ಈ ಬಾರಿ ಡಿ. 30 ರಂದು 261.09 ಕೋಟಿ ರೂ., ಡಿ.31 ರಂದು 204.10 ಕೋಟಿ ರೂ. ಆದಾಯ ಸಂಗ್ರಹವಾಗಿದೆ.

2024 ರ ಡಿಸೆಂಬರ್ ತಿಂಗಳಿನಲ್ಲಿ 3,104 ಕೋಟಿ ರೂ. ಆದಾಯ ಸಂಗ್ರಹವಾಗಿದ್ದರೆ, ಈ ವರ್ಷ ಬರೋಬ್ಬರಿ 3,559.08 ಕೋಟಿ ರೂ. ಆದಾಯ ಸಂಗ್ರಹವಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ರೆ ಈ ವರ್ಷ 1.59 ಲಕ್ಷ ಬಾಕ್ಸ್ ಐಎಂಎಲ್ ಹೆಚ್ಚುವರಿಯಾಗಿ ಮಾರಾಟವಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ರೆ ಈ ವರ್ಷ ಐಎಂಎಲ್ ಮತ್ತು ಬಿಯರ್ ವ್ಯಾಪಾರದಿಂದ ಅಬಕಾರಿ ಇಲಾಖೆಗೆ ಹೆಚ್ಚುವರಿಯಾಗಿ 166.74 ಕೋಟಿ ರೂ. ಆದಾಯ ಬಂದಿದೆ.

## ಬೆಳಾಲಿನ ನಿವೃತ್ತ ಶಿಕ್ಷಕ ದಿ. ತೋಡ್ತಿಲ್ಲಾಯರ ಪುತ್ರ

# ವಿದ್ವಾನ್ ಹೆಚ್. ಸತ್ಯನಾರಾಯಣ ಆಚಾರ್ಯರಿಗೆ ಪೇಜಾವರ ಮಠದ ಶ್ರೀವಿಜಯ ಧ್ವಜ ಪ್ರಶಸ್ತಿ

• **ಹೊಸ ಕನ್ನಡ, ಬೆಳ್ತಂಗಡಿ**

ಬೆಳ್ತಂಗಡಿ ತಾಲೂಕು ಬೆಳಾಲಿನ ನಿವೃತ್ತ ಮುಖ್ಯ ಶಿಕ್ಷಕ ದಿ. ಸುಬ್ರಾಯ ತೋಡ್ತಿಲ್ಲಾಯರ ಪುತ್ರ ವಿದ್ವಾನ್ ಹೆಚ್. ಸತ್ಯನಾರಾಯಣ ಆಚಾರ್ಯರಿಗೆ ಪೇಜಾವರ ಮಠದಿಂದ 2025ನೇ ಸಾಲಿನ ಶ್ರೀವಿಜಯ ಧ್ವಜ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



ಈ ಪ್ರಶಸ್ತಿಯನ್ನು ಶಾಸ್ತ್ರ ಮತ್ತು ವೇದಾಂತ ವಿಭಾಗದಲ್ಲಿ ವಿಶೇಷ ಸೇವೆ ಸಲ್ಲಿಸಿದ ವಿದ್ವಾಂಸರಿಗೆ ನೀಡಲಾಗುತ್ತದೆ. ಡಿ 23 ರಂದು ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದರ ಆರನೇಯ ಮಹಾ ಸಮಾರಾಧನೆಯ ವಿಶ್ವಸಂಭ್ರಮ ಕಾರ್ಯಕ್ರಮದಲ್ಲಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಸುವರ್ಣ ಕಂಕಣವನ್ನು ತೊಡಿಸಿ ಪ್ರಶಸ್ತಿ ಪ್ರದಾನ ಮಾಡಿದರು.

# ಧರ್ಮಸ್ಥಳ ಬುರುಡೆ ತನಿಖೆ ಶೀಘ್ರ ಮುಕ್ತಾಯ

• **ಹೊಸ ಕನ್ನಡ, ಬೆಂಗಳೂರು**



ಈ ವರ್ಷ ಬಾಕಿ ಇರುವ ಎಸ್‌ಐಟಿ, ಸಿಐಡಿ ಮುಂತಾದ ತನಿಖೆಗಳನ್ನು ಪೂರ್ಣಗೊಳಿಸುತ್ತೇವೆ. ಧರ್ಮಸ್ಥಳ ಪ್ರಕರಣ ಸೇರಿದಂತೆ ಯಾವುದೆಲ್ಲ ಬಾಕಿ ಪ್ರಕರಣ ಇವೆಯೋ ಈ ವರ್ಷ ಪೂರ್ಣಗೊಳಿಸುತ್ತೇವೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು. ಈ ಬಗ್ಗೆ ಗುರುವಾರ ಅವರು ಸದಾಶಿವನಗರದ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದರು.

ಹೈಕಮಾಂಡ್ ತೀರ್ಮಾನಿಸಿದರೆ ರಾಜಕೀಯ ಪದೋನ್ನತಿ 'ಮನುಷ್ಯನಿಗೆ ಆಕಾಂಕ್ಷೆ ಎನ್ನುವುದು ಇರಲೇಬೇಕು, ಇಲ್ಲ ಅಂದರೆ ಮನುಷ್ಯ ಅನಿಸಿಕೊಳ್ಳಲ್ಲ. ಎಲ್ಲರಂತೆ ನನಗೂ ಆಕಾಂಕ್ಷೆ ಇದೆ. ಹೈಕಮಾಂಡ್ ತೀರ್ಮಾನಿಸಿದರೆ ರಾಜಕೀಯ ಪದೋನ್ನತಿ ಆಗುತ್ತದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ್ ಸೂಚ್ಯವಾಗಿ ಹೇಳಿದರು. ನಾನು ಇಲ್ಲಿಯವರೆಗೆ ಆಶಾವಾದಿಯಾಗಿಯೇ ಬದುಕಿದ್ದೇನೆ. ಜೀವನದಲ್ಲಿ ಏನೇನೋ ಆಗಬೇಕು ಎಂದು ಬಯಕೆ ಎಲ್ಲರಿಗೂ ಇರುತ್ತದೆ ಅನ್ನುವ ಮೂಲಕ ತಾಲೂಕು ಸಿಎಂ ಅಭ್ಯರ್ಥಿ ಎಂದು ಹೇಳಿದ್ದಾರೆ.




This newspaper is published by Chitrakala A.R. from NO. 3-3 Belal, Belthangady Taluk, Dakshina Kannada, Karnataka- 574240 on behalf of, Sudarshan B Praveen, edited by Praveen Kumar K and printed by Jayaraj P Arakeri P at AJ Eco Product, CTS No 208, Plot No B019, KSSIDC Gamangatti Industrial Area, Dharwad, Karnataka- 580025. (Phone No. 81478 20538).